ಅಪ್ರತಿಮ ಸುಂದರ ಕರಕುಶಲತೆ
ಪರಿಪೂರ್ಣತೆಯ ಹಂತದ ಸಂತೃಪ್ತಿ
ಗ್ಲೆನಿಶಿಯಾ ಡಿಸೈನರ್
ಡೋರ್ & ಗ್ಲೆಶು ಫರ್ನಿಚರ್
ನಂದಳಿಕೆ, ವಯಾ ಬೆಳ್ಮಣ್, ಕಾರ್ಕಳ ತಾಲೂಕು
ಫೋನ್: 08258-274075, 285060
ಶೋರೂಂ, ನಂದಳಿಕೆ
ಸಹ ಸಂಸ್ಥೆ: ಜೀನಸ್ ವುಡ್ ಇಂಡಸ್ಟ್ರೀಸ್ ಸೊಮಿಲ್, ನಂದಳಿಕೆ
ಪ್ರೊ| ಗ್ರೆಗರಿ ಬಿ. ಮಿನೇಜಸ್(ಎಡ್ವಿ)



ಸಂಪಾದಕರು: ರೇಮಂಡ್ ಡಿ'ಕುನಾ
ಎಂ.ಎ. ಇನ್ ಜರ್ನಲಿಸಂ, ಬಿ.ಎ.,ಎಲ್.ಎಲ್.ಬಿ.
ESTD: 2004 E-mail:pingaara@gmail.com

# 10 ನೇ ವರ್ಷ ಪಿಂಗಾರ

ಮುಂಬೈ, ದ.ಕ., ಉಡುಪಿ, ಕಾಸರಗೋಡು ಜಿಲ್ಲೆಗಳ ಏಕೈಕ ಪತ್ರಿಕೆ

Licensed to post without prepayment Licence No. SK/WPP / MNG / 183/2022-24

Regd. No.: MNG/954/2022-2024



impression
The Copier Solutions
- Multi Colour Copiers,
- Black & White Copiers
- Spiral Binding
- Spares & Toners
- Laser printer Catridges & Refill

Also we provide copiers for Rental
Lawrence - 9741885005, 9164845005
Impressionl2016@gmail.com
#3w-3-265, Near Marilyn Apartment,
Opp. AL helen, Bejai, Mangalore - 575 004
Canon KONICA MINOLTA xerox KYOCERA EPSON



● RNI: KARKAN/2009/29901 ● ಸಂಪುಟ:19 ●ಸಂಚಿಕೆ: 07 ● ಪುಟ: 6 ●PINGARA Published & Posted on 07 April, 2022 at M'luru Head Post Office ●ಏಪ್ರಿಲ್ 13, 2021 ● ಮಂಗಳೂರು, MANGALURU ● ಬೆಲೆ: ರೂ. 3


## ಚಾಂದ್ರ ಮತ್ತು ನೇಸರಳತೆ ಯುಗಾದಿಗಳು

ಭಾರತದಲ್ಲಿ ಎರಡು ಬಗೆಯ ಯುಗಾದಿಗಳು ಇವೆ. ಚಾಂದ್ರಮಾನ ಎಂದರೆ ಚಂದ್ರನ ಲೆಕ್ಕದ ಯುಗಾದಿ. ಇನ್ನೊಂದು ಸೂರ್ಯನ ಲೆಕ್ಕದ ಸೌರಮಾನ ಯುಗಾದಿ.

ಭಾರತದ ಮೂಲನಿವಾಸಿಗಳು ಎಲ್ಲರೂ ಸೌರಮಾನ ಯುಗಾದಿ ಆಚರಣೆ ಮಾಡುತ್ತಾರೆ. ಅದು ಸಹಜವಾಗಿಯೇ ಏಪ್ರಿಲ್ 14ರಂದು ಬರುತ್ತದೆ. ರಾಷ್ಟ್ರೀಯ ಕ್ಯಾಲೆಂಡರ್ ಸೇರಿದ ಮೇಲೆ 15ನೇ ತಾರೀಕಿಗೆ ಎಳೆಯುವುದೂ ಆರಂಭವಾಗಿದೆ.



ತುಳುವರು ತಮ್ಮ ಹೊಸ ವರುಷ ಸೌರಮಾನ ಯುಗಾದಿಯನ್ನು ಬಿಸು ಎನ್ನುತ್ತಾರೆ. ಕೇರಳದವರು ವಿಶು ಎನ್ನುವರು. ದೂರದ ಅಸ್ಸಾಂನವರು ಬಿಹು ಎಂದರೆ ಪಂಜಾಬಿನವರು ಬೈಶಾಕಿ ಎಂದು ಆದರಿಸುವರು.

ತಮಿಳುನಾಡು, ಕೇರಳ, ತುಳು ಕೊಡವ, ಆಂಧ್ರ ಮಹಾರಾಷ್ಟ್ರದ ಬುಡಕಟ್ಟು ಜನರು, ಒಡಿಶಾ, ಚತ್ತೀಸಗಡದ ಕೆಲವು ಪ್ರದೇಶಗಳಲ್ಲಿ, ಪಶ್ಚಿಮ ಬಂಗಾಳದ ಬಹುತೇಕ ಪ್ರದೇಶ, ಸಿಕ್ಕಿಂ, ಪಂಜಾಬ್, ಅಸ್ಸಾಂ, ಹಾಗೂ ಎಲ್ಲ ರಾಜ್ಯಗಳ ಕೆಲವು ಜನಾಂಗಗಳು ಸೌರಮಾನ ಯುಗಾದಿಯನ್ನು ಆದರಿಸುತ್ತಾರೆ.

ಭಾರತಕ್ಕೆ ಬಂದವರ ಲೆಕ್ಕಾಚಾರ ಚಾಂದ್ರಮಾನ. ಆರ್ಯರು ಪರ್ಶಿಯಾದ ದಾರಿಯಾಗಿ ಬರುವಾಗ ಅಲ್ಲಿನ ಚಂದ್ರನ ಲೆಕ್ಕವನ್ನು ಹಿಡಿದುಕೊಂಡು ಬಂದಿರಬೇಕು.

ಚಾಂದ್ರಮಾನ ಲೆಕ್ಕದಲ್ಲಿ ವರುಷಕ್ಕೆ ಐದೂಕಾಲು ದಿನ ಕಡಿಮೆ ಆಗುತ್ತದೆ. ಹಾಗಾಗಿ ನಮ್ಮಲ್ಲಿ ಅಧಿಕ ಮಾಸದ ಪದ್ಧತಿ ಇದೆ. ಹಾಗಾಗಿ ಚಾಂದ್ರಮಾನ ಯುಗಾದಿಯು ಒಂದೇ ದಿನಾಂಕದಲ್ಲಿ ಬರುವುದಿಲ್ಲ. ಪ್ರತಿ ವರುಷ ಬೇರೆ ಬೇರೆ ದಿನಾಂಕಗಳಲ್ಲಿ ಬರುತ್ತದೆ.

ಚಾಂದ್ರಮಾನ ಯುಗಾದಿ ಬಂದವರ ಹೊಸ ವರುಷ ಆದುದರಿಂದ ತುಳುನಾಡಿನಲ್ಲಿ ಕೊಂಕಣಿಗರು, ಬ್ರಾಹ್ಮಣರು ಮೊದಲಾದವರು ಆಚರಿಸುತ್ತಾರೆ. ಮಾಧ್ವ ಬ್ರಾಹ್ಮಣರಲ್ಲಿ ಹೆಚ್ಚಿನವರು ಸೌರಮಾನ ಯುಗಾದಿಯನ್ನು ಒಗ್ಗಿಸಿಕೊಂಡು ಆಚರಿಸುವುದು ಕಾಣುತ್ತದೆ.



ತುಳುವರಲ್ಲಿ ಇದು ಭಾರೀ ಹಬ್ಬ ಎನಿಸಿಲ್ಲ. ಒಂದು ಪಾಯಸ, ಗದ್ದೆಯಲ್ಲಿ ಪೊಟ್ಟು ಸುಡುವುದು ಬಿಟ್ಟರೆ ತುಳುವರಲ್ಲಿ ಯುಗಾದಿಗೆ ಬೇರಾವ ಆಚರಣೆಯೂ ಇಲ್ಲ.

ಈಗೀಗ ವೈದಿಕ ಪೂಜೆ ಇತ್ಯಾದಿಗಳಲ್ಲಿ ಹಲವರು ತೊಡಗಿಕೊಂಡಿರುವುದು ಕಂಡು ಬರುತ್ತದೆ ■

✍ ಪೇಜಾ

## ಸುಲಭ ಸಾಹಿತಿಗಳ ಬಗ್ಗೆ ಲೇಖನ; ಕಾಲದ ಕೋಲ

ನಾನು ಹಲವಾರು ವೇದಿಕೆಗಳಲ್ಲಿ ಭಾಷಣ ಮಾಡುವಾಗಲೂ ಒಂದೆರಡು ಯುಟ್ಯೂಬ್ ಮಾತುಗಳಲ್ಲೂ ಜಾಲತಾಣ ಸಾಹಿತ್ಯ ಯಾವ ರೀತಿಯಲ್ಲಿ ಸಾಹಿತ್ಯವನ್ನು ಬದಲು ಮಾಡುತ್ತಿದೆ ಎಂಬ ಬಗ್ಗೆ ಇದೇ ಭಾವನೆ ವ್ಯಕ್ತ ಪಡಿಸಿದ್ದೇನೆ. ಜಾಲತಾಣ ಸಾಹಿತ್ಯ ವು ಅನಾಯಾಸ ಸರ್ಟಿಫಿಕೇಟ್ ಕೊಡುವ ಮುಖಾಂತರ ಮತ್ತು ಅಪ್ರಬುದ್ಧ ನಿಯಮ ಹೇರಿ ಬರೆಯಲು ನೀಡುವ ಅಲ್ಪ ಕಾಲಾವಕಾಶದ ಕಾರಣದಿಂದಲೂ ಜೊಳ್ಳು ಸಾಹಿತ್ಯದ ಪೂರವಾಗಲು ಅಸ್ತಿವಾರವಾಗಿದೆ. ಎಲ್ಲಾ ಕಾವ್ಯ ಪ್ರಕಾರದಲ್ಲೂ ಸತ್ವಹೀನ ಪ್ರಕಾರಗಳೇ ಹೆಚ್ಚಾಗಿ ಕೇವಲ ಪ್ರಶಸ್ತಿ ಪತ್ರ ಪಡೆಯುವ ವೈಖರಿ ವಾಟ್ಸಾಪ್ ಮಾತ್ರವಲ್ಲದೆ ಫೇಸ್ ಬುಕ್ ಬಳಗಗಳಲ್ಲೂ ಗಮನಿಸಿದ್ದೇನೆ.

ನಾನೂ ಅವರಾಗೇ ಸೇರಿಸಿದ ಕಾರಣ ಮೂರು ದಶಕ ಮೀರಿ ಹಲವಾರು ಬಳಗಗಳಲ್ಲಿದ್ದರೂ ಒಟ್ಟಾರೆ ಬರೆದು ಅಲ್ಪನಾಗುವ ಭಯಕ್ಕೆ ಹೊರತಾಗಿಲ್ಲ.


ಚೌರ್ಯವೂ ಕೂಡಾ ಲಗುಬಗೆಯ ಬರಹದ ನಿಯಮದಿಂದಾಗಿ ಮತ್ತು ಹಲವು ಹತ್ತುಕಡೆ ಪ್ರದರ್ಶಿಸ ಬಹುದಾದ ಸರ್ಟಿಫಿಕೇಟ್ ಸಲುವಾಗಿ ಉಂಟಾಗಲೂ ಬಹುದು. ಇದರಲ್ಲಿ ಹೊಸಬರಲ್ಲದೇ ಹಲವಾರು ಹಳಬರೆನಿಸಿದವರೂ ಇರ ಬಹುದು. ಈ ಸೌಲಭ್ಯ ಮುಖೇನ ಪ್ರಶಸ್ತಿಗಳ ರಾಶಿ ಬಾಚಿ ದೊಡ್ಡವರಾದವರೂ ಇರ ಬಹುದು. ಅಧ್ಯಯನ ಮತ್ತು ಸ್ವಂತ ಬುದ್ಧಿಮತ್ತೆ ಮುಖಾಂತರ ಮೂಡುವ ಬರಹಗಳು ಶಾಶ್ವತೀಕರಣ ಕಾಣ ಬಹುದು. ಮುಕ್ತಕ ಗಜಲ್ ತರಹದ ಬರಹಗಳೂ ಇವಕ್ಕೆ ಹೊರತಾಗಿಲ್ಲ

ಸದ್ಯ ನವ್ಯ ಧಾಟಿಯ ಕಾವ್ಯ ಪ್ರಕಾರಗಳಲ್ಲಿ ಯಾವುದೇ ಬಳಗ ಅಷ್ಟಾಗಿ ಚಲಾವಣೆಯಲ್ಲಿರುವುದು ಕಾಣ್ತಾ ಇಲ್ಲ.ಯಾಕೆಂದರೆ ಅದರಲ್ಲಿ ಸಮಾನಸಾಲು,ಅಕ್ಷರ ಸಂಖ್ಯೆ, ಅಂತ್ಯ ಪ್ರಾಸ, ದತ್ತಸಾಲು ಇತ್ಯಾದಿಗಳನ್ನಿ ಹೇರಲು ಕಷ್ಟ.

ಹಾಗಾಗಿ ಇನ್ನೂ ಪತ್ರಿಕೆಯಲ್ಲಿ ಪ್ರಕಟವಾಗಲು ಅಂಥವುಗಳೇ ಉಳಿದಿವೆ ಎನ್ನಬಹುದು.

ಸುಲಭದಲ್ಲಿ ಸಾಹಿತಿಯಾಗುವ ದೊಡ್ಡ. ವೇದಿಕೆ ಜಾಲತಾಣ* *ಗೂಗಲ್ ನಂತಹ ಪಿತಾಮಹರ ತಾಣ.

ಅಲ್ಲಿಂದ ಇಲ್ಲಿಗೆ ಎಂಬಂತೆ ಉಂಬಳಿಯಾಗಿ ತೆಗೆದು ಕಾಪಿ ಪೇಸ್ಟ ಮಾಡಿ ಅಥವಾ ಬುದ್ಧಿ ಬಲಿತಿದ್ದರೆ ಹಿಂದೆ ಮುಂದೆ ಮಾಡಿ ಸಚಿತ್ರ ಸ್ವ ನಾಮಧೇಯ ಹಾಕಿ ಪ್ರಕಟಿಸಿ ಪುಕ್ಕಟೆ ಸಿಗುವ ಬಣ್ಣದ ಪ್ರಶಸ್ತಿ ಪತ್ರ ಸಹಿತವಾಗಿ ಬೀಗಿ ಹೆಸರಾಗುವವರು ಬಹಳಷ್ಟು ಇರುವ ಸತ್ಯ ಎಲ್ಲರಿಗೂ ಅರಿವಿರದ ಸಂಗತಿಯಲ್ಲ. ಆದರೆ ಹೊಸತಾಗಿ ಈಜು ಕಲಿಯಲು ಹೊಳೆಗೆ ಹಾರಿದವರ ಪರಿಸ್ಥಿತಿ ಶೋಚನೀಯ.



ಆನೆಯನ್ನು ಮುಟ್ಟಿ ಬಾಲವೋ ಕಿವಿಯೋ ಸೊಂಡಿಲೋ ಕಾಲೋ ಮುಟ್ಟಿ ಕೃತಾರ್ಥರಾಗುವವರ ಈ ಕೇರೆ ತಿನ್ನುವ ರಾಜ್ಯದಲ್ಲಿ ಸಭ್ಯನಿಗೆ ನಡುವಿನತುಂಡು ನನಗಿರಲಿ ಎನ್ನಲು ಆತ್ಮ ಸಾಕ್ಷಿ ಬಿಡುವುದಿಲ್ಲ. ಅಷ್ಟೆ ■

✍ ಡಾ. ಸುರೇಶ್ ನೆಗಳಗುಳಿ




# ಕನ್ನಡಿಯ ಸನ್ನಡತೆ

✍ರೇಮಂಡ್ ಡಿಕುನಾ ತಾಕೊಡೆ



ಕಥೆ ಹೀಗಿದೆ. ಇಡೀ ದಿನ ಮನೆಯಲಿ ಕುಳಿತು ತಿನ್ನುವ ಒಬ್ಬರು ನೆರೆಯ ಮನೆಯನು ಇಣುಕುವ ಅಭ್ಯಾಸ ಮಾಡದ್ದರು. ಇಣುಕಿ ನೋಡಿ ಯಾವತ್ತೂ ಆ ಮನೆಯವರಿಗೆ ದೂರುತ್ತಿದ್ದರಂತೆ. ಕೊಳಕರು. ಸರಿಯಾಗಿ ಮನೆಯನ್ನು ಸ್ವಚ್ಛ ಇಡದವರು ಮುಂತಾಗಿ.

ನೆರೆಯವರ ಬಗ್ಗೆ ಕೇಳಿದ ಒಬ್ಬರು ದೂರುವವರ ಮನೆಗೆ ಬಂದು ನೋಡಲು, ಇವರದೇ ಕಿಟಕಿಯ ಕನ್ನಡಿಯ ಗಲೀಜಿನಿಂದ ಹೀಗೆ ಕಾಣುತ್ತದೆ ಎಂದು ಹೇಳಿ ದೂರುವವನ ಮನೆಯ ಕಿಡಿಕಿ ಶುಚಿಗೊಳಿಸಲು ಹೇಳಿದರು.

ಕುಮಟಾ ಪಟ್ಟಣದಲ್ಲಿ ಕೊಂಕಣಿ ಅಕಾಡೆಮಿ ನನ್ನ ಪುಸ್ತಕ ಚಾರೊಳಿ ಬಿಡುಗಡೆ ಮಾಡಲು ಇದೆ ಎಂದಾಗ ಅಪರೂಪಕ್ಕೆ ಸರಕಾರದ ಕೆಂಪು ಬಣ್ಣದ ಬಸ್ಸಿನಲ್ಲಿ 16ನಂಬ್ರ ಸೀಡಿನಲ್ಲಿ ಕುಳಿತು ಹೋಗುವ ಭಾಗ್ಯ ಪಡೆದೆ.

ಲೋರಿ ಚಲಾಯಿಸಿ ಓಡಾಡಿದ 1986–92 ವರೆಗಿನ ದಿನಗಳು ನೆನಪುಗಳು ಮರುಕಳಿಸುವ ಆಸೆಯಿಂದ ನಾಲ್ಕೂವರೆ ಗಂಟೆಗಳ ಪ್ರಯಾಣ ಕಣ್ಣು ಬಿಟ್ಟು ಸುತ್ತ ನೋಡಲು ತೊಡಗಿದೆ.

ಬಿಜೈ ಸರಕಾರಿ ಬಸ್ಸು ಹತ್ತಿ ಕುಳಿತಾಗ ಆಗಲೇ ಸೀಟಿನ ಮೇಲೆ ತನ್ನ ಚೀಲ ಇಟ್ಟು ಕುಳಿತ ಕಿಟಕಿ ಬದಿಯ 18ನಂಬ್ರದ ಸೀಟಿನವರು ತನ್ನ ಭುಜದ ಭಾಗದಲ್ಲಿ ಗಾಳಿ ಹೊಡೆಯಲು ಮಾತ್ರ ಕನ್ನಡಿ ಸರಿಸಿ ಒಳಗೆ ಗಾಳಿ ಬಾರದಂತೆ ಕುಳಿತುಕೊಂಡು ಬಿಟ್ಟಿದ್ದರು.

ಇನ್ನು ಇಬ್ಬರು ಕುಳಿತು ಹೋಗುವ 14 ಕಿಟಕಿ ಸೀಟಿನಲ್ಲಿ ಕನ್ನಡಿ ಭದ್ರವಾಗಿ ಹಾಕಿ ಕಿವಿಗೆ ಬೂಚಿ ಹಾಕಿ ತನ್ನ ಲೋಕದಲ್ಲಿ ಚಿನ್ನಾರಿ ಕುಳಿತು ಕರಾವಳಿಯ ಬೇಸಿಗೆಯ ಮೋಡದ ಒಳಗಿನ ಬಿಸಿಲಸೆಕೆ ಬೆನ್ನಿನ ಮೇಲೆ ಬೆವರ ಹನಿಗಳನ್ನು ತೊಟ್ಟಿಕ್ಕಲು ಮಾಡಿತ್ತು. ಗೌರವಾಸ್ತ ಕರಾವಳಿಯ ಜನರು ತುಟಿಪಿಟಿಕ್ ಅನ್ನದೆ ಇದ್ದರು.

ತಡೆಯದೆ ಎರಡೂ ಕಿಟಕಿ ಸಂಭ್ರಮಿತರಿಗೆ ಹೇಳಿ ಸೆರೆ ಬಿಡಿಸಿ ಗಾಳಿ ಬಸ್ಸಿನ ವೇಗದಷ್ಟೇ ಒಳಗೆ ನುಗ್ಗಿದಾಗ ಹಾಯೆನಿಸಿತು.

ಈ ಜನರ ಸ್ವಾರ್ಥ ಹೀಗೇನೇ ಇರುತ್ತದೆ.

ತಮ್ಮ ಪಟ್ಟಭದ್ರತೆಗೆ ಬೊಟ್ಟು ಮಾಡಿ ನಾನೂ ಪಾಲುದಾರ ಅನ್ನುವವರೆಗೆ ತಾವು ಕಬಳಿಕೆ ಮಾಡುತ್ತಾರೆ.

ಸ್ವತಃ ಮಾಡುವ ಜನರು ಕಡಿಮೆಯಾಗಿದ್ದರೆ. ಕೇಳಿದರೆ ಕೊಡುವ ಜನರು ಇದ್ದರೆ.

ಕೇಳಿಯೂ ಕೊಡದವರು ಇರುವ ಸಮಯ ಇದು.

ನಮ್ಮ ಒಳಗಡೆ ಒಂದು ಧೃಡತೆ ಬೇಕು.

ನಾವು ಹಕ್ಕು ಕೇಳಿದಾಗ ಸುಮ್ಮನಿರಿ ಎಂದು ಬಾಯಿ ಮುಚ್ಚಿಸುವ ಪೈಕಿ ನಮ್ಮ ಮನೆಯವರೂ ಇರುತ್ತಾರೆ.

ಮನೆಗೆ ಬಂದು ಬೇಕಾದರೆ ತೊಡಕುಮಾಡಿದವರಿಗೆ ಬೈದು ಗೊಣಗುಟ್ಟುತ್ತಾರೆ.ಆದರೆ ಆ ಸ್ಥಳದಲ್ಲಿ "ಕ್ರೈಕಟ್ ಬಾಯ್ ಮುಚ್" ಮಾಡಿ ಬಹಳ ಗೌರವ ಮೆರೆದು ಹೈರಾಣಾಗಿಸುತ್ತಾರೆ.

ಕಿಟಕಿಗಳು ತೆರೆದು ಗಾಳಿಯ ಹೊಡೆತವನ್ನು ಜೊತೆಯಲಿ ಇದ್ದವರ ಜೊತೆಯಲ್ಲಿ ಸೇವಿಸಿದರೆ ಅದು ಪ್ರಕೃತಿಯಲ್ಲಿ ನಡೆಯುವ ಅರಳುವಿಕೆ ಅಥವಾ ಕೊಳೆಯುವಿಕೆ ವಾಸನೆ ಅಥವಾ ಸುವಾಸನೆ ಮೂಗಿಗೆ ತೂರಿಸಿ ಬಿಡುತ್ತದೆ. ಇದರ ಪರಿಣಾಮ ನಮ್ಮ ಚಲನೆಗಳು ಅದಕ್ಕೆ ತಕ್ಕಂತೆ ಟವಲು ಮೂಗಿಗೆ ಹಿಡಿದು ಅಥವಾ ಪರಿಮಳವನ್ನು ಅಘ್ರಾಣಿಸಿ ಮಾಡಲು ಗಾಳಿ ಪೂರಕವಾಗಿ ಅದರ ಮೊದಲು ಕಿಟಕಿಗಳು ಅದಕ್ಕೆ ಸಹಾಯಕರಾಗಿ ಇರುತ್ತವೆ.

ಮನದ ಕಿಟಕಿಗಳು ಬಾಗಿಲುಗಳು ತೆರೆದೇ ಈ ಲೋಕದಲ್ಲಿ ಇರಬೇಕು.

ನಮ್ಮ ಸುತ್ತಣ ಹುತ್ತಗಳಲ್ಲಿ ಅಡಗಿರುವ ಕ್ರಿಮಿನಲ್ ಮನದ ಕೀಟಗಳು ಆಗಲೀ ಅವುಗಳನ್ನು ಓಡಿಸಿ ಅಡಗಿದ ಉರಗಗಳನ್ನು ಜತನವೂ ಸಾವಧಾನವೂ ಮಾಡಬೇಕು.

ನೋಡಿ ಪರಾಂಭರಿಸಲು ಕಿಟಕಿಗಳು ಬಾಗಿಲುಗಳು ಮುಚ್ಚಿದರೆ ಅಸಾಧ್ಯ.

ಈ ಸಣ್ಣ ಪುಟ್ಟ ಅತಿಕ್ರಮಣ ಪ್ರತಿಭಟನೆ ಮಾಡಿ ನಮ್ಮ ಸಮಾನ ಹಕ್ಕುಗಳನ್ನು ರಕ್ಷಿಸಲು ಮನಸ್ಸು ಮಾಡಿದರೆ ಸತ್ಯ ನೀತಿ ನ್ಯಾಯ ಪ್ರಾಮಾಣಿಕತೆಯ ಪಾಠವನ್ನು ಮಾಡಲು ದೊರೆತ ಅವಕಾಶಗಳು ಸದುಪಯೋಗ ಮಾಡಿದಂತಾದೀತು.

ನೋಡಿ. ಮುಂದಿನ ಬಾರಿ ಅವಕಾಶ ಸಿಕ್ಕಾಗ.. ಶುಭವಾಗಲಿ

# ಪತಿ ಪತ್ನಿ ಸುತಾಲಯ:02

✍ರೆ. ಥಿಯೋಲೊಜಿಯನ್

ಪತಿ ಪತ್ನಿ ಒಬ್ಬರಿಗೊಬ್ಬರು ಗುರುತಿಸುವಿಕೆ ಅಂದರೆ recognition ಕೊಡಲೇ ಬೇಕಾಗುತ್ತದೆ. ತಾವು ಮಾಡಿದ ದಾಂದಲೆಗಳನ್ನು ನರಿಯಂತೆ ಬೆಣ್ಣೆ ತಿಂದು ಕೋತಿಯ ಮುಖಕ್ಕೆ ಬಿರೆಸಿದಂತೆ ಮಾಡಿದರೆ ಒಮ್ಮೆ ಅಥವ ಎರಡು ಬಾರಿ ತಮಾಷೆಯಾಗಿ ಆದೀತು ಪ್ರತೀ ಬಾರಿಯೂ ಇದು ಸರಿಯಾಗಿ ಬರಲಾರದು.

ಒಳ್ಳೆಯ ಕೆಲಸಗಳು ಮತ್ತು ಉತ್ತಮ ಪರಿಪಾಠಗಳು ಪತಿ ಮಾಡಿದರೆ ಪತ್ನಿ ಅಥವ ಪತ್ನಿ ಮಾಡಿದರೆ ಪತಿ ಮೆಚ್ಚುಗೆಯನ್ನು ವ್ಯಕ್ತಪಡಿಸಲೇಬೇಕು.

Barter System ಅಂತಲೂ ಹೇಳಬಹುದು.

ಗೊತ್ತಲ್ಲ. ಈ currency ಚಲಾವಣೆಗೆ ಬರುವ ಮೊದಲು ಕುಂಬಳಕಾಯಿ ಕೊಟ್ಟು ತಿಂಗಿನಕಾಯಿ ಪಡೆಯುವುದು. ಅಕ್ಕಿ ಕೊಟ್ಟು ಎಣ್ಣೆಯನ್ನು ಕೊಂಡುಕೊಳ್ಳುವುದು ನಡೆದೇ ಇತ್ತು. ಹಾಗೇನೇ ಪತಿ ಪತ್ನಿ ನಡುವೆ ಇರಬೇಕು.

ನಡೆಗಳಿಗೆ ಸಂಸಾರದ ಪತಿ ಪತ್ನಿಯರ ಪ್ರಕ್ರಿಯೆಯಲ್ಲಿ ಬೆಲೆ ಇಲ್ಲ, ಅಥವಾ ಅದಕ್ಕೆಂದು ನಾವು ನೀನಿದನ್ನು ಮಾಡಿದರೆ ನಾನದನ್ನು ಮಾಡಿಯೆನು ಎಂದು ಹೇಳಲಾಗದು.

ಅದಕ್ಕೇ ಹೇಳುವುದು ನಾವು, ಮುಕ್ತವಾದ ಮತ್ತು ಒಬ್ಬರಿಗೊಬ್ಬರು ಶಾಶ್ವತವಾಗಿ ಒಂದಾದ ಒಂದು ಜೀವನ ಪತಿ ಪತ್ನಿಯಾದಾಗ ಬೇಕಾದರೆ ಒಬ್ಬರಿಂದು ಇನ್ನೊಬ್ಬರು ಏನನ್ನೂ ಅಪೇಕ್ಷಿಸಬಾರದು ಹಾಗೇನೆ ಒಬ್ಬರನ್ನೊಬ್ಬರು ಉಪೇಕ್ಷಿಸಲೂ ಬಾರದು.

ಕಾರಣ ಇಲ್ಲದಿಲ್ಲಾ.

ಸಂಬಂಧಗಳು ವಿಶ್ಲೇಷಿಸಿದರೆ ನಾವು ಅಲ್ಲಿ consideration ಅಂದರೆ ತಿರುವ ಬೇಲೆ ಏನಿರುತ್ತದೆ.

ಉದಾಹರಣೆಗೆ ಮನೆಗೆಲಸಕ್ಕೆ ಬಂದವರು ಮಾಡಿದ ಅಡಿಗೆ, ಸ್ವಚ್ಛತೆ ಇನ್ನಿತರ ಕೆಲಸಗಳಿಗೆ ನಾವು salary, ಸಂಬಳ ಅಥವ ಪಗಾರ್ ಕೊಡುತ್ತೇವೆ ತಾನೇ?

ಆಫಿಸಿಗೆ ಕೆಲಸಕ್ಕೆ ಬಂದರೆ ನಾವೇನು ಕೊಡುತ್ತೇವೆ. ತಿಂಗಳ ಕೊನೆಗೆ ಪಗಾರ ಸಂಬಳ ಕೊಟ್ಟು ಬಿಡುತ್ತೇವೆ.

ಹಾಗೇನಾದರೂ ಪತ್ನಿ ದಿನವಿಡೀ ಮೈಮುರಿದು ದುಡಿದು ನಮಗೆ ರುಚಿ ಶುಚಿ ಅಡುಗೆ, ಶುಚಿತ್ವ ಮಾಡಿದಾಗ ಕೊಡ್ತೇವೆಯೆ? ಇಲ್ಲವಲ್ಲ.

ಅದೇ ಪತಿಯಾಗಲೀ ಪತ್ನಿಯಾಗಲೀ ಹೊರಗಿನ ಕೆಲಸಕ್ಕೆ ದಿನವಿಡೀ ಹೋಗಿ ಸಂಜೆಯಾಗಲಿ ತಿಂಗಳ ಕೊನೆಯಾಗಲೀ ಸರಿದ ಪಗಾರ, ಸಂಬಳ ಅಥವ ಆದಾಯ ಇನ್ನಿಲ್ಲದಷ್ಟು ತಿಂದು ಮುಗಿಸಿದ ಪತ್ನಿ ಮಕ್ಕಳು ಅಥವ ಪತಿ ಮಕ್ಕಳ return ಏನು ಕೊಡೋದು?

ಇದೆಲ್ಲಾ ಮೂಲ ಭೂತವಾದ ಪ್ರಶ್ನೆ ಕೇಳಲು ಇಂದು ಅವಕಾಶ ಏಕೆಂದರೆ ಮಾಡಿದ ಕೆಲಸಕ್ಕೆ ನಾವೇನು ಹಿಂದೆ ಕೊಡುತ್ತೇವೆ. ಕೃಷಿ ಮಾಡಿ, ಮೈಮುರಿದ ಮಕ್ಕಳು ಮರಿಗಳನ್ನು ಸಾಕುವ ಕಾಯಕದ ಹಿಂದೆ ತೃಪ್ತಿ ಮಾತ್ರ ವಿನ ಬೇರೇನೂ ಇಲ್ಲದಿದ್ದರೂ ನಮ್ಮ, ತಿನ್ನುವ ಬಾಯಿಗಳ ಕೆಲಸ ಬಹಳ ಇದೆ.

ಅದೇ ಪತಿ ಪತ್ನಿ ಸಂಬಂಧದಲ್ಲಿ recognition ಅಂದುಕೊಳ್ಳಬಹುದು.

ಪ್ರತಿ ಬಾರಿ ಪತಿಯಾಗಲೀ ಪತ್ನಿಯಾಗಲೀ ಮಾಡಿದ ಕೆಲಸಗಳನ್ನು ನಾವು ಒಂದು ಮೆಚ್ಚುಗೆಯ ಮಾತು ಕೃತಿ ದೃಷ್ಟಿಯಿಂದ ನೋಡಿದರೆ ಆ ಕ್ರಿಯೆಯು ತುಂಬುವ ಹರುಷ ಬೇರೆ.

ಇನ್ನಷ್ಟು ಹೆಚ್ಚು ಆಸಕ್ತಿಯಿಂದ ಅಡುಗೆ ಮಾಡುವ ಅಮ್ಮ ಅಂದರೆ ಪತ್ನಿ, ಇನ್ನಷ್ಟು ಹುರುಪಿನಿಂದ ತನ್ನ ಹೊರಗಿನ ಕೆಲಸ ಮಾಡಿ ಮನೆಗೆಗೆ ಪ್ರಯತ್ನಿಸಿ ಹೆಚ್ಚಿನ ಆದಾಯ ಪ್ರಯತ್ನಿಸಿ ಮನೆಯ ಅಗತ್ಯಗಳಿಗೆ ಸ್ಪಂದಿಸುವಿ ಆಗುವಂತೆ ಇರುವ ರೀತಿಯ ವಿಭಿನ್ನ ಮತ್ತು ಆಲೋಚಿಸಲು ಯೋಗ್ಯ.

ಇದೆಲ್ಲಾ ಬಾಹ್ಯವಾಗಿ ಮಾತುಕತೆಯಾದರೆ ಮಾನಸಿಕವಾಗಿ ತೃಪ್ತಿಯಾಗಬೇಕಾದ ಅನಿವಾರ್ಯತೆಯು ಪತಿ ಪತ್ನಿ ಇಬ್ಬರ ಬಿಟ್ಟಿಗೆರುವಿಕೆಗೆ ಬಹಳ ಅಗತ್ಯ.

ಯಾವುದೆ ರೀತಿಯಲ್ಲಿ ಕಚೇರಿಯಾಗಲೀ ಸಂಸ್ಥೆಯಾಗಲಿ ಒಟ್ಟಿಗೆ ಕೆಲಸ ಮಾಡಲು ಅದಕ್ಕೊಂದು ಹೊಂದಾಣಿಕೆ ಬೇಕು. ಒಬ್ಬರೊನ್ನೊಬ್ಬರು ಸಹ್ಯವಾಗಿಸುವಂತಿರಬೇಕು. ತೀರಾ ಅಸಹ್ಯವಾದಾಗ ಲಕ್ಷ ಸಂಬಳದ ಕೆಲಸಗಳು, ಪಾರ್ಟ್‌ನರ್‌ಶಿಪ್‌ಗಳು ತೊರೆದು ಹೊರಹೋದ ದಾಖಲೆಗಳಿವೆ.

ಹಾಗೇನೆ ಪತಿ ಪತ್ನಿ ಸಂಬಂಧ.

ಇಬ್ಬರಿಗೂ ಸಹ್ಯವಾಗಿರುವಂತೆ ಹಿತಮಿತವಾಗಿಯೇ ಇರಬೇಕು.

ಒಬ್ಬೊಬ್ಬರಿಗೆ ಅಸಹ್ಯ ಅಥವ ಬಂದಿಯಾದಂತೆ ಆದರೆ ಅಲ್ಲಿ ಘರ್ಷಣೆಗಳು ನಡೆದು ದಾಂಪತ್ಯ ಬಿರುಕು ಮಾಡಿದಂತಿರುತ್ತದೆ.

6ನೇ ಪುಟದಿಂದ ಮುಂದುವರಿಯುವುದು

# ಮುಕ್ತಕ

ಮರದ ಮೇಲಿನ ಕೋತಿಯಣಕಿಸಿದರಣಕಿಪುದು
ಬರಿ ಕಲ್ಲನೆಸೆದರೆ ಹಣ್ಣನೊಗೆದು ಹಾರುವುದು
ಮೆರೆ ಜೀವನದ ಮಜಲಲಿ ಕೆಡುಕ ಬಗೆದಾತಂಗೆ
ಬೀರುತಲಿ ಸವಿನೆನಪ ಧೀರತಮ್ಮ



✍ಡಾ. ಸುರೇಶ್ ನೆಗಳಗುಳಿ

ಇಂದು ಹಾಕಿದ ಬೀಜ ನಾಳೆ ಹೆಮ್ಮರವಾಗಿ
ಚೆಂದ ನೆರಳೂಡುವುದು ರೂಢಿ ಸತ್ಯ.
ಹೊಂದಿ ಮನೆ ಮಂದಿಗೆಲ್ಲರಿಗೆ ನೆರವಿನ ಬೀಜ
ತಂದು ಬೇಗನೆ ಬಿತ್ತು ಧೀರತಮ್ಮ

## ಏ.30–ಮೇ 1: ಚಿತ್ರಾಪುರ ಕಡಲ ತೀರದಲ್ಲಿ 'ಬೀಚ್ ಫೆಸ್ಟ್' ಸಂಭ್ರಮ

**ಸುರತ್ಕಲ್:** "ರಾಜ್ಯ ಇಂಟಕ್, ಮೊಗವೀರ ಮಹಾಸಭಾ, ಅಮೆಚೂರ್ ಕಬಡ್ಡಿ ಅಸೋಸಿಯೇಶನ್ ಮತ್ತು ಹಲವಾರು ಸಂಘಟನೆಗಳ ಸಹಕಾರದೊಂದಿಗೆ ಏಪ್ರಿಲ್ 30 ಹಾಗೂ ಮೇ 1ರಂದು ಚಿತ್ರಾಪುರ ಕಡಲ ತೀರದಲ್ಲಿ ಬೀಚ್ ಫೆಸ್ಟ್ ಸಂಭ್ರಮ ನಡೆಯಲಿದೆ" ಎಂದು ಇಂಟಕ್ ರಾಜ್ಯಾಧ್ಯಕ್ಷ ರಾಕೇಶ್ ಮಲ್ಲಿ ಹೇಳಿದರು.

ಚಿತ್ರಾಪುರ ಬೀಚ್‌ನಲ್ಲಿ ಕಾರ್ಯಕ್ರಮದ ಲಾಂಛನವನ್ನು ಅನಾವರಣಗೊಳಿಸಿ ಮಾತನಾಡಿದ ಅವರು, "ಏಪ್ರಿಲ್ 30 ಮತ್ತು ಮೇ 1ರಂದು ಕಾರ್ಮಿಕರಿಗಾಗಿ ಬೀಚ್ ಫೆಸ್ಟ್ ಮತ್ತು ಕಡಲ ತೀರದ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. 30ರಂದು ಸಾಮೂಹಿಕ



ಯೋಗಾಭ್ಯಾಸ ನಡೆಯಲಿದ್ದು ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ. ಗಾಳಿಪಟ ಸ್ಪರ್ಧೆ, ಆಹಾರೋತ್ಸವ, ಸರ್ಫಿಂಗ್ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ಹಗ್ಗಜಗ್ಗಾಟ, ಕಬಡ್ಡಿ ಸೇರಿದಂತೆ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ಥಳೀಯರು ಮಾತ್ರವಲ್ಲದೆ ಇಡೀ ಜಿಲ್ಲೆಯ ಜನರು, ಹೊರಜಿಲ್ಲೆಯ ಆಸಕ್ತರು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು" ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಇಂಟಕ್ ಅಧ್ಯಕ್ಷ ರಾಕೇಶ್ ಮಲ್ಲಿ, ಯತೀಶ್ ಬೈಕಂಪಾಡಿ, ಇಂಟಕ್ ಜಿಲ್ಲಾಧ್ಯಕ್ಷ ಮನೋಹರ್ ಶೆಟ್ಟಿ, ರತನ್ ಶೆಟ್ಟಿ, ಪುರುಷೋತ್ತಮ ಪೂಜಾರಿ, ಮೊಗವೀರ ಸಭಾ ಗುರಿಕಾರ ಅಮರಾನಾಥ ಸುವರ್ಣ ಉಪಸ್ಥಿತರಿದ್ದರು.

ಪಣಂಬೂರು ಮೊಗವೀರ ಮಹಾಸಭಾ ಅಧ್ಯಕ್ಷ ಮಾಧವ ಸುವರ್ಣ ಅವರು ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು.

**ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇಂಧನ ಸಚಿವರು, ಕರ್ನಾಟಕ ಸರಕಾರ ಇವರು ದಿನಾಂಕ 31.03.2022 ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಪೂರ್ಣ ಯೋಜನೆಯಾದ ರಂಗಮಂದಿರ ಕಾಯ್ದಿರಿಸುವಿಕೆ ಮತ್ತು ದತ್ತಾಂಶ ಸಂಗ್ರಹವನ್ನು ಆನ್‌ಲೈನ್ ಮೂಲಕ ನೊಂದಾಯಿಸುವ ಯೋಜನೆಯನ್ನು ಲೋಕಾರ್ಪಣೆಗೊಳಿಸಿರುತ್ತಾರೆ. ಕಲಾವಿದರ ದತ್ತಾಂಶ ಸಂಗ್ರಹ ಯೋಜನೆಯಡಿ ಕೊಂಕಣಿ ಸಾಹಿತಿ/ ಕಲಾವಿದರುಗಳು ಸೇವಾಸಿಂಧು ಪೋರ್ಟಲ್ sevasindhu.karnataka.gov.in ಮೂಲಕ ತಮ್ಮ ಮಾಹಿತಿಯನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೊಂಕಣಿ ಸಾಹಿತಿ/ಕಲಾವಿದರುಗಳು ಈ ದತ್ತಾಂಶ ಸಂಗ್ರಹ ಯೋಜನೆಯಡಿ ನೊಂದಾಯಿಸಿಕೊಳ್ಳಬೇಕಾಗಿ ವಿನಂತಿ.**

## 21 ದಿನಗಳ ಸ್ವಿಮ್ಮಿಂಗ್ ಶಿಬಿರ ಉದ್ಘಾಟನೆ



**ಮಂಗಳೂರು:** ಶಕ್ತಿನಗರದ ಶಕ್ತಿ ರೆಸಿಡೆನ್ಶಿಯಲ್ ಶಾಲೆ ಮತ್ತು ಶಕ್ತಿ ಪದವಿ ಪೂರ್ವಕಾಲೇಜು, ಶಕ್ತಿ ಪೂರ್ವ ಪ್ರಾಥಮಿಕ ಶಾಲೆ ಮತ್ತು ಮಂಗಳ ಸ್ವಿಮ್ಮಿಂಗ್ ಕ್ಲಬ್‌ನ ಸಹಯೋಗದೊಂದಿಗೆ ಹಮ್ಮಿಕೊಂಡಿರುವ 21 ದಿನಗಳ ಸ್ವಿಮ್ಮಿಂಗ್ ಶಿಬಿರವನ್ನು ಶಕ್ತಿ ವಿದ್ಯಾ ಸಂಸ್ಥೆಯ ಪ್ರಧಾನ ಸಲಹೆಗಾರರಾದ ರಮೇಶ್ ಕೆ. ಅವರು ದೀಪ ಬೆಳಗಿಸಿ, ಕದ್ರಿ ಶ್ರೀ ಮಂಜುನಾಥ ಕ್ಷೇತ್ರದಿಂದ ತಂದ ಪವಿತ್ರ ತೀರ್ಥವನ್ನು ಈಜು ಕೊಳಕ್ಕೆ ಸಿಂಪಡಿಸುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು "ಉತ್ತಮವಾದ ಗುರಿಯನ್ನು ಹೊಂದಿ ಇದರಿಂದ ನೀವು ಯಾವಾಗಲೂ ಸುಲಭವಾಗಿ ಉತ್ತಮ ಮತ್ತು ಶ್ರೇಷ್ಠತೆಯನ್ನು ತಲುಪಬಹುದು. ದೊಡ್ಡ ವಿಷಯಗಳು ಸುಲಭವಾದ ವಲಯಗಳಿಂದ ಎಂದಿಗೂ ಬರುವುದಿಲ್ಲ. ಈಜುವುದರಲ್ಲಿ ಮಾತ್ರವಲ್ಲ ಜೀವನದಲ್ಲಿಯೂ ನಿಮ್ಮನ್ನು ನಂಬಿರಿ. ನೀವು ಮುಕ್ತ ಮನಸ್ಸು ಹೊಂದಿರಬೇಕು".

ಮಂಗಳ ಸ್ವಿಮ್ಮಿಂಗ್ ಕ್ಲಬ್‌ನ ಕಾರ್ಯದರ್ಶಿ ಶಿವಾನಂದ ಗಟ್ಟಿಯವರು ಶಿಬಿರಾರ್ಥಿಗಳಿಗೆ ನಿರೀಕ್ಷಿತ ನಿಯಮಗಳು ಮತ್ತು ಅಭ್ಯಾಸ ಸೂಚನೆಗಳನ್ನು ನೀಡಿದರು. ಸಂಸ್ಥೆಯ ಈಜು ತರಬೇತುದಾರರಾದ ರಾಜೇಶ್ ಖಾರ್ವಿ, ಕೀರ್ತನ್ ಮತ್ತು ನಯನ ಉಪಸ್ಥಿತರಿದ್ದರು. ಕನ್ನಡ ಶಿಕ್ಷಕ ಶರಣಪ್ಪ ನಿರೂಪಿಸಿ ವಂದಿಸಿದರು.

## ಸಂತ ಫಿಲೋಮಿನಾ ಕಾಲೇಜಿನ ಉಪ ಪ್ರಾಂಶುಪಾಲರಾಗಿ ಪ್ರೊ. ಉದಯ ಕೆ ನೇಮಕ

**ಪುತ್ತೂರು:** ಕೆಥೊಲಿಕ್ ಶಿಕ್ಷಣ ಮಂಡಳಿ ಮಂಗಳೂರು ಇದರ ಆಡಳಿತಕ್ಕೊಳಪಟ್ಟಿರುವ ಮತ್ತು ಪುತ್ತೂರು ಮಾಯಿದೆದೇವುಸ್ ಸಮೂಹ ಶಿಕ್ಷಣ ಸಂಸ್ಥೆಗಳಿಗೆ ಸೇರಿದ ಸಂತ ಫಿಲೋಮಿನಾ ಕಾಲೇಜಿನ ಗಣಿತಶಾಸ್ತ್ರ ವಿಭಾಗ ಮುಖ್ಯಸ್ಥ ಹಾಗೂ ವಿಜ್ಞಾನ ನಿಕಾಯದ ಡೀನ್ ಆಗಿರುವ ಪ್ರೊ. ಉದಯ ಕಾನ ಇವರನ್ನು ಆಡಳಿತ ಮಂಡಳಿಯು ಕಾಲೇಜಿನ ಉಪ ಪ್ರಾಂಶುಪಾಲರಾಗಿ ನೇಮಕಗೊಳಿಸಿರುತ್ತದೆ. ಇತ್ತೀಚೆಗೆ ಉಪಪ್ರಾಂಶುಪಾಲರಾಗಿ ಸೇವಾ ನಿವೃತ್ತಿಗೊಂಡ ಪ್ರೊ. ದಿನಕರ ರಾವ್ ಅವರ ಸ್ಥಾನಕ್ಕೆ ಪ್ರೊ.ಉದಯ ಕೆ ಅವರನ್ನು ನೇಮಿಸಲಾಗಿದೆ.



ಕಾಲೇಜಿನ ಸಂಚಾಲಕರಾದ ಅ|ವಂ| ಜೆರೋಮ್ ಲಾರೆನ್ಸ್ ಮಸ್ಕರೇನ್ಹಸ್ ಮತ್ತು ಪ್ರಾಂಶು ಪಾಲರಾದ ವಂ| ಡಾ| ಆ್ಯಂಟನಿ ಪ್ರಕಾಶ್ ಮೊಂತೆರೋ ಇವರು ಉಪ ಪ್ರಾಂಶುಪಾಲರಾಗಿ ನೇಮಕಗೊಂಡ ಪ್ರೊ. ಉದಯ ಕೆ ಇವರನ್ನು ಅಭಿನಂದಿಸಿ, ಶುಭಹಾರೈಸಿದ್ದಾರೆ.

**ಚಂದಾ ವಿವರ**

| | | | |
|---|---|---|---|
| ಒಂದು ವರ್ಷಕ್ಕೆ | : | ರೂ. | 250/- |
| ಐದು ವರ್ಷಕ್ಕೆ | : | ರೂ. | 1,000/- |
| ಹದಿನೈದು ವರ್ಷಗಳಿಗೆ | : | ರೂ. | 3,000/- |
| ಅಜೀವ ಸದಸ್ಯತನ | : | ರೂ. | 15,000/- |

## ಭಾಷಾ ಬಹುತ್ವ ಒಪ್ಪಿಕೊಳ್ಳುವಿಕೆಯೇ ಸಾಮರಸ್ಯಕ್ಕೆ ಮುನ್ನುಡಿ: ಫಾ. ಅಲ್ವಿನ್ ಸೆರಾವೋ

**ಮಂಗಳೂರು:** ಕೊಂಕಣಿ ಅಧ್ಯಯನ ಪೀಠ ಹಾಗೂ ಸ್ಕೂಲ್ ಆಫ್ ಸೋಶಿಯಲ್ ವರ್ಕ್, ರೋಶನಿ ನಿಲಯ ಜಂಟಿಯಾಗಿ ಇತ್ತೀಚೆಗೆ ಕಾಲೇಜಿನಲ್ಲಿ ಭಾಷಾ ಸಾಮರಸ್ಯದ ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದವು. ಕಾರ್ಯಕ್ರಮವನ್ನು ಕೊಂಕಣಿ ಸಂಸ್ಕೃತಿಯ ಸಂಕೇತವಾದ ಗುಮಟಾ ವಾದನದೊಂದಿಗೆ ಉದ್ಘಾಟಿಸಲಾಯಿತು. ಭಾಷಾ ಸಾಮರಸ್ಯ ಕುರಿತು ಉಪನ್ಯಾಸ ನೀಡಿದ ನಾರಾವಿಯ ಸೈಂಟ್ ಅಂತೋನಿ ಕಾಲೇಜಿನ ಪ್ರಾಂಶುಪಾಲ ಫಾ. ಅಲ್ವಿನ್ ಸೆರಾವೋ, ಭಾಷಾ ಬಹುತ್ವ ನಮ್ಮ ದೇಶದ ಹೆಗ್ಗುರುತಾಗಿದೆ. ಇನ್ನೋರ್ವ ಪ್ರಸಿದ್ದ ಕೊಂಕಣಿ ಸಾಹಿತಿ ಹಾಗೂ ವಿಮರ್ಶಕ ಎಚ್.ಎಂ ಪೆರ್ನಾಲ್, ಭಾಷಾ ಗುಣಮಟ್ಟದ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಎಂಬ ಕುರಿತು ಉಪನ್ಯಾಸ ನೀಡಿದರು.




ರೋಶನಿ ನಿಲಯ ಸಂಸ್ಥೆಯ ಕಾರ್ಯದರ್ಶಿ ಸಿ. ಎವ್ಲಿನ್ ಬೆನ್ನಿಸ್ ಅಧ್ಯಕ್ಷತೆ ವಹಿಸಿದ್ದರು. ಕೊಂಕಣಿ ಅಧ್ಯಯನ ಪೀಠದ ಸಂಯೋಜಕ ಡಾ. ಜಯವಂತ ನಾಯಕ್ ಪ್ರಾಸ್ತಾವಿಕವಾಗಿ ಮಾತನಾಡಿ ಕೊಂಕಣಿ ಅಧ್ಯಯನ ಪೀಠದ ಕಾರ್ಯ ಚಟುವಟಿಕೆಯ ವಿವರ ನೀಡಿದರು. ಕಾಲೇಜಿನ ಆಂಗ್ಲ ಭಾಷಾ ಸಹಾಯಕ ಪ್ರಾಧ್ಯಾಪಕಿ ವಂದನಾ ಡಿಸೋಜ ಕಾರ್ಯಕ್ರಮ ಸಂಯೋಜಿಸಿದರು. ದೀಪ್ತಿ ಮೊರಾಸ್ ಸ್ವಾಗತಿಸಿ, ವೆರ್ನೋನ್ ಕ್ರಿಸ್ ಪಿಂಟೋ ವಂದಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಭಾಗಿಯಾಗಿದ್ದರು.

## ಪುಡಾರ್ ಪ್ರತಿಷ್ಠಾನದಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ

**ಮಂಗಳೂರು:** ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಅರಿವುಭರಿತ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಮಾನ್ಯತೆಗೆ ಒಳಗೊಡಿಸುವ ಕಜ್ಜ ಮಂಗಳೂರಿನ ಮಿಲಾಗ್ರಿಸ್ ಜುಬಿಲಿ ಹಾಲ್‌ನಲ್ಲಿ ನಡೆಯಿತು.



ಅತಿ ವಂದನೀಯ ಮಂಗಳೂರು ಧರ್ಮ ಪ್ರಾಂತ್ಯದ ಬಿಶಪ್ ಪೀಟರ್ ಪಾವುಲ್ ಸಲ್ದಾನಾ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯದರ್ಶಿ ಫಾ. ವಾಲ್ಟರ್ ಡಿಮೆಲ್ಲೋ ಎಲ್ಲರನ್ನೂ ಸ್ವಾಗತಿಸಿದರು.

ಹೈಕೋರ್ಟ್ ಸಿವಿಲ್ ನ್ಯಾಯಾಧೀಶೆ ಆಗಿ ಆಯ್ಕೆಯಾಗಿ ಕಾರ್ಯಾರಂಭ ಮಾಡಿರುವ ಜಾಯ್ಲಿನ್ ಮೆಂಡೋನ್ಸಾ ಅವರನ್ನು ಸನ್ಮಾನಿಸಲಾಯಿತು.

ಕರ್ಯಕ್ರಮದಲ್ಲಿ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ 182 ವಿದ್ಯರ್ಥಿಗಳನ್ನು ಗೌರವಿಸಲಾಯಿತು.

ಇನ್ವೆಸ್ಟ್‌ಮೆಂಟ್ ಅಡ್ವೈಜರ್ ಜೆರಾಲ್ಡ್ ಕುಲಾಸೊ ಮತ್ತು ಕೆಥೋಲಿಕ್ ಸಭಾದ ಆಧ್ಯಾತ್ಮಿಕ ನರ್ದೇಶಕ ವಂ| ಜೆ.ಬಿ. ಸಲ್ಡಾನ್ಹಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ಪುಡಾರ್ ಪ್ರತಿಷ್ಠಾನದ ಅಧ್ಯಕ್ಷ ಜೆರಾಲ್ಡ್ ಡಿಕೋಸ್ತಾ, ಕೆಥೋಲಿಕ್ ಸಭಾದ ಅಧ್ಯಕ್ಷರಾದ ಸ್ಟ್ಯಾನಿ ಲೋಬೊ (ಮಂಗಳೂರು) ಮತ್ತು ಮೇರಿ ಡಿಸೋಜಾ (ಉಡುಪಿ), ಎಂಸಿಸಿ ಬ್ಯಾಂಕ್‌ನ ಅಧ್ಯಕ್ಷ ಅನಿಲ್ ಲೋಬೊ ಫರ್ಮಾಯ್, ಪುಡಾರ್ ಪ್ರತಿಷ್ಠಾನದ ಎಲ್‌ರೋಯ್ ಕಿರಣ್ ಕ್ರಾಸ್ಟೋ, ನೈಜಿಲ್ ಪಿರೇರಾ, ಎಲ್. ಜೆ. ಫರ್ನಾಂಡಿಸ್, ಐರಿನ್ ಪಿರೇರಾ ಮತ್ತಿತರರು ವೇದಿಕೆಯಲ್ಲಿದ್ದರು. ಜಾನ್ ಬಾಪ್ಟಿಸ್ಟ್ ಅವರು ಸಂದೇಶ ನೀಡಿದರು. ಜೆರಾಲ್ಡ್ ಅಧ್ಯಕ್ಷತೆ ವಹಿಸಿದ್ದೆರು. ಸ್ಟ್ಯಾನಿ ಲೋಬೋ ಮೊದಲಾದವರು ಉಪಸ್ಥಿತರಿದ್ದರು.

**ಪರಮಪೂಜ್ಯ ಸದ್ಗುರು ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯುವ ಧರ್ಮಸ್ಥಳ ಶ್ರೀ ರಾಮ ಕ್ಷೇತ್ರ ಮಹಾಸಂಸ್ಥಾನದ ಪ್ರತಿಷ್ಠಾ ಹಾಗು ಜಾತ್ರಾ ಮಹೋತ್ಸವದ ಪ್ರಯುಕ್ತ**



**ಹಮ್ಮಿಕೊಂಡಿರುವ ಶ್ರೀ ರಾಮನಾಮ ಸಪ್ತಾಹದ ನಂದಾದೀಪದ ಜ್ಯೋತಿ ಬೆಳಗಿಸುವ ಉದ್ಘಾಟನೆ ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾದ್ಯಕ್ಷರು ಸುದರ್ಶನ ಎಂ. ಭಾಗವಹಿಸಿದರು. ಸಂಸದರು ಬಿಜೆಪಿ ರಾಜ್ಯಾಧ್ಯಕ್ಷರು ನಳಿನ್ ಕುಮಾರ್ ಕಟೀಲ್, ರಾಜ್ಯ ಸರಕಾರದ ಸಚಿವರಾದ ಕೆ.ಎಸ್.ಈಶ್ವರಪ್ಪ, ಶಾಸಕರಾದ ಹರೀಶ್ ಪೂಂಜ, ಹರೀಶ್ ಕುಮಾರ್, ಪ್ರಮುಖರಾದ ಹರಿಕೃಷ್ಣ ಬಂಟ್ವಾಳ, ಜಯಂತ್ ಕೋಟ್ಯಾನ್, ಪೀತಾಂಬರ ಹೆರಾಜೆ, ಕೇಶವ ಬಂಗೇರ, ಕೃಷ್ಣಪ್ಪ ಪೂಜಾರಿ, ಧನಲಕ್ಷ್ಮೀ, ಕಿರಣ್ ಕೋಡಿಕಲ್ ಹಾಗು ಸಮಿತಿ ಸದಸ್ಯರು ಉಪಸ್ಥಿತರಿದ್ದರು.**

## ಸಂತಸದ ನಾಡು ಫಿನ್‌ಲ್ಯಾಂಡ್ ದುಃಖಿತ ದೇ ಭಾರತ

2022ರ ಹ್ಯಾಪಿ ಹ್ಯಾಪಿ ಸಂತಸದ ದೇಶಗಳ ಪಟ್ಟಿ ಬಿಡುಗಡೆಯಾಗಿದ್ದು, ಸ್ಕ್ಯಾಂಡಿನೇವಿಯ ದೇಶಗಳು ಸಂತೋಷದವಾದರೆ ಭಾರತದಂಥ ದೇಶಗಳು ಶೋಕ ಗೀತೆಯಲ್ಲಿ ಇವೆ.

8 ಅಂಕಗಳಲ್ಲಿ ಏಳೂವರೆಗಿಂತ ಹೆಚ್ಚು ಅಂಕ ಪಡೆದು ಮೊದಲ ನಾಲ್ಕು ಸ್ಥಾನಗಳಲ್ಲಿ ಕ್ರಮವಾಗಿ ಫಿನ್‌ಲ್ಯಾಂಡ್, ಡೆನ್ಮಾರ್ಕ್, ಸ್ವಿಜರ್‌ಲ್ಯಾಂಡ್, ಐಸ್‌ಲ್ಯಾಂಡ್‌ಗಳು ಇವೆ.

ಭಾರತವು ಒಂದು ಚಿಲ್ಲರೆ ಅಂಕ ಪಡೆದ ಸಂತೋಷದಲ್ಲಿ ತುಂಬ ಹಿಂದಿದೆ. ಪಾಕಿಸ್ತಾನದಂಥ ದೇಶಗಳಿಗಿಂತಲೂ ಕೆಳಗಿನ ಸ್ಥಾನದಲ್ಲಿ ಭಾರತ ಇದೆ.

## ಬಾಲಿವುಡ್‌ಗೆ ನೆಗೆದ ಕೋಸ್ಟಲ್‌ವುಡ್‌ನ ಸೋನಲ್ ಮೊಂತೆರೋ



ಕೋಸ್ಟಲ್‌ವುಡ್ ಆರಂಭ, ಆಮೇಲೆ ಸ್ಯಾಂಡಲ್‌ವುಡ್ ಎಂದು ಹೊರಟ ಮಂಗಳೂರಿನ ಸೋನಲ್ ಮೊಂತೆರೋ 'ಸರೋಜಿನಿ' ಚಿತ್ರದ ಮೂಲಕ ಬಾಲಿವುಡ್‌ಗೆ ಪ್ರವೇಶ ಪಡೆದಿದ್ದಾರೆ.

ಸರೋಜಿನಿ ನಾಯ್ಡು ಜೀವನಾಧಾರಿತ ಈ ಸಿನಿಮಾದ ಮೊದಲ ನೋಟದ ಪೋಸ್ಟರ್ ಮತ್ತು ಫೋಟೋಗಳು ಬಿಡುಗಡೆಯಾಗಿವೆ. ಮುಖ್ಯ ಪಾತ್ರದಲ್ಲಿ ಶಾಂತಿಪ್ರಿಯ ನಟಿಸುವರು. ಸರೋಜಿನಿ ನಾಯ್ಡು ಯುವತಿ ಇದ್ದಾಗಿನ ಪಾತ್ರವನ್ನು ಸೋನಲ್ ಮೊಂತೆರೋ ನಿರ್ವಹಿಸುವರು.

## ರಣಬೀರ್, ಆಲಿಯಾ ಅಭಿನಯದ ಬ್ರಹ್ಮಾಸ್ತ್ರ ಸಿನಿಮಾದ ಚಿತ್ರೀಕರಣ 5 ವರ್ಷದ ಬಳಿಕ ಪೂರ್ಣ



**ಮುಂಬೈ:** ಸುಮಾರು 5 ವರ್ಷಗಳ ಹಿಂದೆ ಚಿತ್ರೀಕರಣ ಪ್ರಾರಂಭಿಸಿದ್ದ ನಟ ಆಲಿಯಾ ಭಟ್ ಮತ್ತು ರಣಬೀರ್ ಕಪೂರ್ ಅಭಿನಯದ ಬಾಲಿವುಡ್ ಸಿನಿಮಾ 'ಬ್ರಹ್ಮಾಸ್ತ್ರ' ಇದೀಗ ಚಿತ್ರೀಕರಣವನ್ನು ಪೂರ್ಣ ಗೊಳಿಸಿದೆ.


ನಿರ್ದೇಶಕ ಅಯಾನ್ ಮುಖರ್ಜಿ ತನ್ನ ಅಧಿಕೃತ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಚಿತ್ರೀಕರಣ ಮುಕ್ತಾಯವಾಗಿರುವ ಮಾಹಿತಿ ಹಂಚಿಕೊಂಡಿದ್ದು, 'ಬ್ರಹ್ಮಾಸ್ತ್ರ' ಚಿತ್ರೀಕರಣ ಪ್ರಾರಂಭ ಮಾಡಿ 5 ವರ್ಷಗಳು ಕಳೆದಿದೆ. ಕೊನೆಗೂ ನಮ್ಮ ಚಿತ್ರದ ಕೊನೆಯ ಚಿತ್ರೀಕರಣ ಮಾಡಿ ಮುಗಿಸಿದ್ದೇವೆ ಎಂದು ತಿಳಿಸಿದ್ದಾರೆ.

ಆಲಿಯಾ ಮತ್ತು ರಣಬೀರ್ ಇಬ್ಬರೂ ಕತ್ತಿಗೆ ಹೂವಿನ ಹಾರ ಹಾಕಿ ದೇವಸ್ಥಾನದಲ್ಲಿರುವ ಫೋಟೋವನ್ನು ಕೂಡ ಶೇರ್ ಮಾಡಿದ್ದಾರೆ.

ಇನ್ನು ಬ್ರಹ್ಮಾಸ್ತ್ರ ಸಿನಿಮಾ ಹಿಂದಿಯೊಂದಿಗೆ ದಕ್ಷಿಣ ಭಾರತದ ಭಾಷೆಗಳಲ್ಲೂ ಬಿಡುಗಡೆಯಾಗುತ್ತಿದ್ದು, ಸೆಪ್ಟಂಬರ್ 9ರಂದು ತೆರೆಗೆ ಬರುತ್ತಿದೆ.

## ಇನ್ನು ಮಕ್ಕಳು ಸಾಕು ಎಂದು ಪತಿಗೆ ಖಡಕ್ ವಾರ್ನಿಂಗ್ ಕೊಟ್ಟ ಕರೀನಾ

**ಮುಂಬೈ:** ನಟ ಸೈಫ್ ಅಲಿಖಾನ್ ಅವರಿಗೆ ಮಕ್ಕಳ ಕುರಿತಾಗಿ ಅತೀವ ಕಾಳಜಿ. ದಶಕಕ್ಕೊಂದರಂತೆ ನಾಲ್ಕು ಮಕ್ಕಳ ತಂದೆಯಾದ ಖ್ಯಾತಿ ಅವರದು. ಆದರೆ, ಇನ್ನು ಮಕ್ಕಳು ಸಾಕು ಎಂಬುದಾಗಿ ಅವರ ಪತ್ನಿ ಕರೀನಾ ಕಪೂರ್ ಖಡಕ್ಕಾಗಿ ಹೇಳಿದ್ದಾರಂತೆ.



ಸೈಫ್ ಅಲಿಖಾನ್ ಮತ್ತು ಅಮೃತಾ ಸಿಂಗ್ ಅವರಿಗೆ ಸಾರಾ ಅಲಿಖಾನ್ ಮತ್ತು ಇಬ್ರಾಹಿಂ ಅಲಿಖಾನ್ ಎಂಬ ಇಬ್ಬರು ಮಕ್ಕಳಿದ್ದಾರೆ. ಬಳಿಕ ಅಮೃತಾ ಸಿಂಗ್‌ಗೆ ವಿಚ್ಛೇದನ ನೀಡಿ ಸೈಫ್ ಕರೀನಾ ಕಪೂರ್ ರನ್ನು ವರಿಸಿದ್ದರು. ಈ ಜೋಡಿಗೆ ತೈಮೂರ್ ಮತ್ತು ಜೆಹ್ ಇಬ್ಬರು ಮಕ್ಕಳಿದ್ದಾರೆ. ಸೈಫ್ ಮೊದಲ ಬಾರಿ ಸಾರಾಗೆ ತಂದೆಯಾದಾಗ ಅವರಿಗೆ ಕೇವಲ 23 ವರ್ಷವಾಗಿತ್ತಂತೆ. ಪ್ರಸ್ತುತ ಅವರಿಗೆ 51 ವರ್ಷವಾಗಿದ್ದು, ನಾಲ್ಕು ಮಕ್ಕಳನ್ನು ಹೊಂದಿದ್ದಾರೆ. ಪ್ರತಿ ದಶಕಕ್ಕೆ ಒಂದೊಂದು ಮಗುವಿನ ತಂದೆಯಾದ ಹೆಗ್ಗಳಿಕೆ ಅವರದು. ಆದರೆ, ನಾಲ್ಕು ಮಕ್ಕಳನ್ನು ಪಡೆದಿರುವ ಸೈಫ್‌ಗೆ ಇನ್ನು ಮುಂದೆ ಮಕ್ಕಳನ್ನು ಪಡೆಯುವುದು ಬೇಡ ಎಂದು ಪತ್ನಿ ಕರೀನಾ ಎಚ್ಚರಿಕೆ ನೀಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

## ಪಾಕಿಸ್ತಾನದ ಸಂಸತ್ತು ವಿಸರ್ಜನೆ

ಪ್ರಧಾನಿ ಇಮ್ರಾನ್ ಖಾನ್ ಸಲಹೆಯ ಮೇಲೆ ಪಾಕಿಸ್ತಾನದ ಅಧ್ಯಕ್ಷ ಆರಿಫ್ ಆಲಿ ಯವರು ಪಾಕಿಸ್ತಾನದ ರಾಷ್ಟ್ರೀಯ ಎಸೆಂಬ್ಲಿ ಯನ್ನು ವಿಸರ್ಜಿಸಿದರು.



ಸಂಸತ್ತಿನಲ್ಲಿ ಉಪಸ್ಪೀಕರ್ ಕಾಸಿಂ ಸೂರಿಯವರು ಅವಿಶ್ವಾಸ ನಿರ್ಣಯ ಮಂಡನೆಯು ಸಂವಿಧಾನದ 5ನೇ ವಿಧಿ ಯನ್ನು ಉಲ್ಲಂಘನೆ ಮಾಡಿದೆ ಎಂದು ಅದನ್ನು ವಜಾ ಮಾಡಿದರು.

ನಮ್ಮಲ್ಲಿ ಸಂಖ್ಯಾಬಲ ಇತ್ತು. ಇದು ಅಸಾಂವಿಧಾನಿಕ ಎಂದು ಪ್ರತಿಪಕ್ಷಗಳವರು ಹೇಳಿದ್ದಾರೆ. ಈ ನಡುವೆ ಇಮ್ರಾನ್ ಖಾನ್ ಅವರು ಕೂಡಲೆ ಚುನಾವಣೆಗೆ ಕರೆ ನೀಡಿದ್ದಾರೆ.

## ಐದು ವರುಷಗಳಲ್ಲಿ 3,999 ಕೋಮು ಗಲಭೆಗಳು



ಭಾರತದಲ್ಲಿ 2016– 20ರ ನಡುವೆ 3,999 ಕೋಮು ಇಲ್ಲವೆ ಧಾರ್ಮಿಕ ಗಲಭೆಗಳು ನಡೆದಿವೆ ಎಂದು ಗೃಹ ವ್ಯವಹಾರಗಳ ಸಹಾಯಕ ಸಚಿವ ನಿತ್ಯಾನಂದ ರಾಯ್ ಅವರು ಸಂಸದರಾದ ಶಶಿ ತರೂರ್ ಮತ್ತು ಪ್ರಕಾಶ್ ಜೋಶಿಯವರ ಪ್ರಶ್ನೆಗೆ ಉತ್ತರಿಸುತ್ತ ಹೇಳಿದರು.

ಎನ್‌ಸಿಆರ್‌ಬಿ– ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ಮಾಹಿತಿಯಂತೆ 2016ರಲ್ಲಿ 869, 2017ರಲ್ಲಿ 723, 2018ರಲ್ಲಿ 512, 2019ರಲ್ಲಿ 438, 2020ರಲ್ಲಿ 887 ಧಾರ್ಮಿಕ ಇಲ್ಲವೇ ಕೋಮು ಗಲಭೆಗಳು ನಡೆದಿವೆ. ಬಿಜೆಪಿ ಕೋಮು ಗಲಭೆಗಳನ್ನು ಬಳಸಿಕೊಳ್ಳುತ್ತಿದೆ ಎಂದು ಪ್ರತಿಪಕ್ಷಗಳವರು ಲೋಕ ಸಭೆಯಲ್ಲಿ ಆರೋಪ ಮಾಡಿದರು.

## ಗುಜರಾತಿನಲ್ಲಿ ಆಮ್ ಆದ್ಮಿ ಪಕ್ಷಕ್ಕೆ 58 ಸ್ಥಾನ

ಇದೇ ವರುಷದ ಡಿಸೆಂಬರ್‌ನಲ್ಲಿ ನಡೆಯುವ ಗುಜರಾತ್ ವಿಧಾನ ಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವು 58 ಕ್ಷೇತ್ರಗಳಲ್ಲಿ ಜಯ ಗಳಿಸಲಿದೆ ಎಂಬುದು ಆಂತರಿಕ ಸಮೀಕ್ಷೆಯಿಂದ ತಿಳಿದು ಬಂದಿದೆ ಎಂದು ಗುಜರಾತಿನ ಎಎಪಿ ಉಸ್ತುವಾರಿ ಡಾ. ಸಂದೀಪ್ ಪಾಠಕ್ ಹೇಳಿದ್ದಾರೆ.

ಬಿಜೆಪಿ ತನ್ನ ಗುಪ್ತಚರರಿಂದ ಪಡೆದ ಮಾಹಿತಿ ಪ್ರಕಾರವೂ ಎಎಪಿ 55ಕ್ಕಿಂತ ಹೆಚ್ಚು ಸ್ಥಾನ ಗಳಿಸಲಿರುವುದು ಸ್ಪಷ್ಟಗೊಂಡಿದೆ ಎಂದು ಅವರು ಹೇಳಿದರು.

ಬಿಜೆಪಿಯನ್ನು ಸೋಲಿಸಲು ಎಎಪಿಗೆ ಮಾತ್ರ ಸಾಧ್ಯ ಎಂದು ಗುಜರಾತ್ ಜನಸಾಮಾನ್ಯರು ಭಾವಿಸಿದ್ದಾರೆ. ಹಳ್ಳಿಗಾಡು ಜನರ ಮತ ಈ ಬಾರಿ ನಮಗೆ ಬೀಳಲಿದೆ ಎಂದು ಎಎಪಿ ಗುಜರಾತ್ ರಾಜ್ಯ ಘಟಕದ ಅಧ್ಯಕ್ಷ ಗೋಪಾಲ್ ಇತಾಲಿಯಾ ತಿಳಿಸಿದ್ದಾರೆ.

ESTD: 2004 ಪಿಂಗಾರ
ಪಿಂಗಾರ
19ನೇ ವರುಷಕ್ಕೆ ದಾಪುಗಾಲು

## ರಾಹುಲ್ ಗಾಂಧಿಯವರಿಗೆ ಆಸ್ತಿ ದಾನ ಮಾಡಿದ ಡೆಹ್ರಾಡೂನಜ್ಜಿ

ಡೆಹ್ರಾಡೂನ್‌ನ 73ರ ಪ್ರಾಯದ ಪುಷ್ಪಾ ಮುಂಜಿಯಾಲ್ ಎನ್ನುವವರು ತನ್ನ 50 ಲಕ್ಷ ರೂಪಾಯಿ ಮೌಲ್ಯದ ಭೂಮಿ ಮತ್ತು 10 ತೊಲ ಬಂಗಾರವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ದಾನ ಮಾಡಿದರು.



ನಾನು ಆತನ ತತ್ವದಿಂದ ಪ್ರಭಾವಿತನಾಗಿದ್ದೇನೆ ಎನ್ನುವ ಪುಷ್ಪಾ ಅವರು ಸ್ವ ಇಚ್ಛೆಯಿಂದ ಇವನ್ನು ದಾನ ಮಾಡುವುದಾಗಿ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದರು. ಆಸ್ತಿ ದಾನ ಸಂಬಂಧ ದಾಖಲೆ ಪತ್ರಗಳನ್ನು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲರಿಗೆ ಹಸ್ತಾಂತರ ಮಾಡಿದ್ದಾರೆ.

## 'ಕೆಜಿಎಫ್ 2' ಬುಕ್ಕಿಂಗ್‌ನಲ್ಲಿ ಬ್ರಿಟನ್ ದಾಖಲೆ

'ಕೆಜಿಎಫ್ 2' ಚಿತ್ರವನ್ನು ವಿಶ್ವದ ಹಲವು ಮೂಲೆಗಳಿಗೆ ತಲುಪಿಸಲು ಚಿತ್ರತಂಡ ಪಣತೊಟ್ಟಿದೆ. ಇದೇ ಕಾರಣದಿಂದ ಚಿತ್ರ ರಿಲೀಸ್‌ಗೂ ಮೊದಲೇ ಹಲವು ದಾಖಲೆಗಳನ್ನು ಬರೆಯುತ್ತಿದೆ.



ಯಶ್ ನಟನೆಯ 'ಕೆಜಿಎಫ್ 2' (KGF 2) ಏಪ್ರಿಲ್ 14ರಂದು ವಿಶ್ವಾದ್ಯಂತ ರಿಲೀಸ್ ಆಗುತ್ತಿದೆ.

ಯುರೋಪ್, ಅಮೇರಿಕಾ, ರಷ್ಯಾ ಸೇರಿದಂತೆ ವಿಶ್ವದ ಹಲವು ಪ್ರದೇಶಗಳಲ್ಲಿ 'ಕೆಜಿಎಫ್ 2' ದೊಡ್ಡ ಮಟ್ಟದಲ್ಲಿ ರಿಲೀಸ್ ಆಗುತ್ತಿದೆ. ವಿಶೇಷವೆಂದರೆ ಎಲ್ಲೆಡೆ ಕನ್ನಡ ಸೇರಿದಂತೆ ತೆಲುಗು, ಹಿಂದಿ ಮೊದಲಾದ ಭಾಷೆಗಳಲ್ಲೂ ಚಿತ್ರವನ್ನು ರಿಲೀಸ್ ಮಾಡಲಾಗುತ್ತಿದೆ. ಇದೀಗ ಗ್ರೀಸ್‌ನಲ್ಲಿ ರಿಲೀಸ್ ಆಗಲಿರುವ ಮೊದಲ ದಕ್ಷಿಣ ಭಾರತದ ಸಿನಿಮಾ ಎಂಬ ಖ್ಯಾತಿಯನ್ನು ಕೆಜಿಎಫ್ ಬರೆಯಲಿದೆ.

ಈ ಬಗ್ಗೆ ನಿರ್ಮಾಣ ಸಂಸ್ಥೆ 'ಹೊಂಬಾಳೆ ಫಿಲ್ಮ್ಸ್' ಟ್ವೀಟ್ ಮಾಡಿ ಮಾಹಿತಿ ಹಂಚಿಕೊಂಡಿದೆ.

ರಷ್ಯಾದಲ್ಲೂ 'ಕೆಜಿಎಫ್ 2' ರಿಲೀಸ್ ಆಗಲಿದೆ. ರಷ್ಯನ್ನರಿಗೆ ಇಂಗ್ಲೀಷ್ ಅಷ್ಟಾಗಿ ಬರದ ಕಾರಣ, ರಷ್ಯನ್ ಸಬ್‌ಟೈಟಲ್ ಮೂಲಕವೇ ಚಿತ್ರವನ್ನು ತೆರೆಕಾಣಿಸಲಾಗುತ್ತಿದೆ.

ಬ್ರಿಟನ್‌ನಲ್ಲಿ 'ಕೆಜಿಎಫ್ 2' ಟಿಕೆಟ್ ಬುಕ್ಕಿಂಗ್ ಜೋರಾಗಿದೆ. ಕೇವಲ 12 ಗಂಟೆಗಳ ಅವಧಿಯಲ್ಲಿ 5,000 ಟಿಕೆಟ್‌ಗಳು ಸೇಲ್ ಆಗಿವೆ. ಇದುವರೆಗೆ ಯಾವುದೇ ಭಾರತೀಯ ಚಿತ್ರವು ಇಷ್ಟು ದೊಡ್ಡ ಮಟ್ಟದಲ್ಲಿ ಪ್ರಿ–ಬುಕ್ಕಿಂಗ್ ಆಗಿರಲಿಲ್ಲ ಎಂದು ಹೇಳಲಾಗಿದೆ.

'ಕೆಜಿಎಫ್ 2' ಸಿನಿಮಾದಲ್ಲಿ ದೊಡ್ಡ ತಾರಾಗಣ ಇದೆ. ಬಾಲಿವುಡ್‌ನ ಖ್ಯಾತ ನಟ ಸಂಜಯ್ ದತ್ ಅಧೀರನಾಗಿ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಮೂಲಕ ರವೀನಾ ಟಂಡನ್ ಹಲವು ವರ್ಷಗಳ ಬಳಿಕ ಸ್ಯಾಂಡಲ್‌ವುಡ್‌ಗೆ ಮರಳುತ್ತಿದ್ದಾರೆ. ಬಹುಭಾಷಾ ನಟ ಪ್ರಕಾಶ್ ರಾಜ್ ಚಿತ್ರದಲ್ಲಿ ನಟಿಸಿದ್ದಾರೆ. ಯಶ್‌ಗೆ ಜತೆಯಾಗಿ ಶ್ರೀನಿಧಿ ಶೆಟ್ಟಿ ಕಾಣಿಸಿಕೊಂಡಿದ್ದಾರೆ. ರವಿ ಬಸ್ರೂರು ಸಂಗೀತ ನೀಡಿದ್ದು, ಭುವನ್ ಗೌಡ ಛಾಯಾಗ್ರಹಣ ಮಾಡಿದ್ದಾರೆ

# ದೈನಂದಿನ ದೇವರಲ್ಲಿ ಮೊರೆಯಿಡುವ ಪ್ರಾರ್ಥನಾ ಗೀತೆ: 'ನನ್ನೊಂದಿಗಿರು' – Abide With Me

ಸಂಜೆಯಾಗುತ್ತಿದೆ, ಕತ್ತಲೆ ಕವಿಯುತ್ತಿದೆ,
ನನ್ನೊಂದಿಗಿರು,
ಎಲ್ಲರೂ ನನ್ನ ಕೈಬಿಟ್ಟು, ಸಂತೈಸುವವರ್‍ಯಾರೂ
ಇಲ್ಲದಿರುವಾಗ,
ಅಸಹಾಯಕರ ಸಹಾಯಕನೇ, ನನ್ನೊಂದಿಗಿರು!

ಜೀವನದ ಕ್ಷಣಕಾಲ ಬಹುಬೇಗ ಕೊನೆಗೊಳ್ಳುತ್ತಿದೆ,
ಈ ಭೂಮಿಯ ಸುಖ ಸಂತಸಗಳೆಲ್ಲಾ ಮಸಕಾಗುತ್ತಿವೆ,
ಅವುಗಳ ವೈಭವಗಳೆಲ್ಲಾ ನಶಿಸಿ ಹೋಗುತ್ತೀವೆ!
ಬದಲಾವಣೆ–ನಾಶ, ಎಲ್ಲೆಲ್ಲೂ ನಾನು ಕಾಣುತ್ತಿರುವೆ
ಎಂದೆಂದೂ ಬದಲಾಗದವನೇ, ನನ್ನೊಂದಿಗಿರು!

ನೀನೆನ್ನ ಜೊತೆಗಿದ್ದರೆ ಯಾವ ಭಯವೂ ನನಗಿಲ್ಲ,
ನನ್ನ ಹರಸುವ ನಿನ್ನ ಕೈಗಳು ನನ್ನ ಮೇಲಿರುವಾಗ
ಯಾವ ಭಾರವೂ ನನಗಿಲ್ಲ, ಯಾವುದೇ ದುಃಖದ
ಕಣ್ಣೀರಿಲ್ಲ;
ಮರಣದ ಕೊಂಡಿ ಎಲ್ಲಿರುವುದಾಗ?
ಸಮಾಧಿಯೇ, ನಿನ್ನ ಜಯವೆಲ್ಲಿದೆ? ಹೇಳೀಗ,
ಎಂದೆಂದೂ ಜಯಶಾಲಿಯಾಗಿ ನಾನಿರುವೆ, ನೀ
ನನ್ನೊಂದಿಗಿರುವಾಗ!

ಮುಸುಕುತ್ತಿರುವ ಈ ಮಬ್ಬಿನಲಿ
ಮುಚ್ಚುತ್ತಿರುವ ನನ್ನ ಕಣ್ಗಳ ಮುಂದೆ ನಿನ್ನ ಶಿಲುಬೆಯ
ಹಿಡಿದು,
ನಿನ್ನ ಹೊಂಬೆಳಕಿನ ಬಾನಿನಡೆ ನನ್ನ ದೃಷ್ಟಿ ಹಾಯಿಸು!
ಸ್ವರ್ಗದ ಬೆಳಗಿನ ಆರಂಭದ ಸಮಯದಿ,
ಭೂಮಿಯ ಮಾಯೆಯ ನೆರಳುಗಳು
ಪಲಾಯನಗೊಳ್ಳುತ್ತಿರುವ ಸಮಯದಿ,
ಜೀವನ–ಮರಣ, ಎರಡರಲ್ಲೂ ನೀ ನನ್ನೊಂದಿಗಿರು,
ನನ್ನೊಂದಿಗಿರು!

"ನನ್ನೊಂದಿಗಿರು" ಎಂಬ ಈ ಪ್ರಾರ್ಥನಾ–ಗೀತೆ, ಸ್ಕೊಟ್‌ಲ್ಯಾಂಡಿನ ಆಂಗ್ಲಿಕನ್, ಹೆನ್ರಿ ಫ್ರಾನ್ಸಿಸ್ ಲಾಯ್ಟ್(1793–1847) ಬರೆದ, **"Abide With Me"** ಎಂಬ ಪ್ರಾರ್ಥನಾ–ಗೀತೆಯ ಅನುವಾದ. ತಮ್ಮ ಜೀವನದ ಯಾವ ಹಂತದಲ್ಲಿದ್ದರೂ, ಪ್ರತಿಯೊಬ್ಬರೂ ತಮ್ಮ ಜೀವನದ ಯಾವ ಹಂತದಲ್ಲಿದ್ದರೂ, ಪ್ರತಿಯೊಬ್ಬರು ತಮ್ಮ ಜೀವನದ ರೀತಿ–ನೀತಿ ವಿಶ್ಲೇಶಿಸಿ, ತಮ್ಮ ಎಲ್ಲಾ ಕಷ್ಟ– ಕಾರ್ಪಣ್ಯಗಳನ್ನು, ಸಮಸ್ಯೆಗಳನ್ನು ದೇವರಲ್ಲಿ ನಿವೇದಿಸಿ, ಆತನ ಸಾಂಗತ್ಯ ಕೋರುವ ಸರ್ವಧರ್ಮಿಯರ ಸರ್ವಕಾಲಿಕ ಪ್ರಾರ್ಥನಾ–ಗೀತೆ ಇದಾಗಿದೆ.



ಕ್ಷಯರೋಗ ಉಲ್ಬಣಿಸಿ, ಜೀವನ್ಮರಣದ ಮಧ್ಯೆ ತೂರಾಡುತ್ತಿದ್ದ ತನ್ನ ಆಪ್ತಮಿತ್ರ ಮಿಲಿಯಮ್ ಲಿ ಹಂಟ್‌ನ ಹಾಸಿಗೆಯ ಬಳಿ ಕುಳಿತು, ಆತನಿಗೆ ಹೆನ್ರಿ ಲಾಯ್ಟ್ ಈ ಪದ್ಯ ರಚಿಸಿದ್ದ. ಆತನ ಜೀವನದ ಕೊನೆಯ ಕ್ಷಣಗಳು ಹತ್ತಿರವಾದಂತೆ, ಹೆನ್ರಿ ಲಾಯ್ಟ್ ಈ ಪ್ರಾರ್ಥನಾ–ಗೀತೆ ಹಾಡಲು ಆರಂಭಿಸಿದ. ವಿಲಿಯಮ್ ಅದನ್ನು ಕೇಳುತ್ತಾ, ಪ್ರಾರ್ಥಿಸುತ್ತಾ, ದೇವರ ಕರಗಳಲ್ಲಿ ತನ್ನ ಪ್ರಾಣ ಒಪ್ಪಿಸಲು ಈ ಪ್ರಾರ್ಥನಾ–ಗೀತೆ ಅವನಿಗೆ ಸಹಾಯವಾಯಿತೆಂದು ಬೇರೆ ಹೇಳಬೇಕಾಗಿಲ್ಲವಲ್ಲಾ? ಅವನ ಮರಣದ ನಂತರ ಹೆನ್ರಿ ಆದರ ಪ್ರತಿಯನ್ನು 'ಲಿ ಹಂಟ್' ಕುಟುಂಬಕ್ಕೆ ನೀಡಿದ. ಅದು ಜನಪ್ರಿಯವಾಗಲು ತಡವಾಗಲಿಲ್ಲ!

ಅದರಲ್ಲಿ ಕ್ರೈಸ್ತ ಧರ್ಮದ ಚಿಹ್ನೆಯಾಗಿರುವ 'ಶಿಲುಬೆ' ಎಂಬ ಶಬ್ಧವಿರುವ ಕಾರಣ, ಅದನ್ನು ಕ್ರೈಸ್ತ ಧರ್ಮದವರು ಮಾತ್ರ ಹಾಡಬಹುದಾದ ಗೀತೆ ಎಂಬಂತೆ ಕೆಲವರಿಗೆ ಅನಿಸಿದ್ದರೂ, ಸರ್ವಧರ್ಮಿಯರ ಭಾವನೆ–ಚಿಂತನೆ–ಪ್ರಾರ್ಥನೆ ಅದು ಒಳಗೊಂಡಿದೆ. ಆದ್ದರಿಂದ ಅದು ಕ್ರೈಸ್ತರಿಗೆ ಮಾತ್ರ ಅದು ಸೀಮಿತವಾಗಿಲ್ಲ. ಯಾರೂ, ಯಾವಾಗ ಬೇಕಾದರೂ ಅದನ್ನು ಹಾಡಬಹುದಾದ, ಪಠಿಸಬಹುದಾದ ಪ್ರಾರ್ಥನಾ ಗೀತೆ ಅದಾಗಿದೆ. ಪ್ರಪಂಚದ ಅನೇಕ ಭಾಷೆಗಳಲ್ಲದು ಅನುವಾದಿಸಲ್ಪಟ್ಟಿದೆ.

ಮಹಾತ್ಮಗಾಂಧಿಗೆ ಅದು ಅಚ್ಚುಮೆಚ್ಚಿನ ಹಾಡಾಗಿತ್ತು. ಆದುದರಿಂದ ವಿಶೇಷ ಸಂದರ್ಭಗಳಲ್ಲಿ ಆಫ್ರಿಕಾದಲ್ಲಿ ಅವರ ಸಬರ 'ಸಬರಮತಿ' ಆಶ್ರಾಮದಲ್ಲಿ ಮತ್ತು ಅವರ ಇತರ ಆಶ್ರಮಗಳಲ್ಲಿ ಅದನ್ನು ಹಾಡಲಾಗುತ್ತಿತ್ತು. ದೆಹಲಿಯಲ್ಲಿ ಗಣರಾಜ್ಯೋತ್ಸವದ ಆಚರಣೆಯ ಮಾರ್ಚಿಂಗ್ ಪರೇಡ್ ಮುಗಿಸಿವಾಗ, ಅವರ ನೆನಪಿಗಾಗಿ ಮ್ಯೂಸಿಕ್ ಬ್ಯಾಂಡ್ ಅದನ್ನು ಹಾಡುವ ಸಂಪ್ರದಾಯ, ಭಾರತ ಒಂದು ಗಣರಾಜ್ಯವೆಂದು 1950, ಜ.26ರಂದು ಘೋಷಿಸಿದ ದಿನದಂದು ಆರಂಭಗೊಂಡು, ಕಳೆದ 2021ರ ವರ್ಷದ ತನಕವೂ ಗಣರಾಜ್ಯೋತ್ಸವದ ಆಚರಣೆಯ ಸಂದರ್ಭದಲ್ಲಿ ಅದನ್ನು ಹಾಡಲಾಗುತ್ತಿತ್ತು. ಆದರೆ ಈ ಪ್ರಸ್ತುತ 2022ನೇ ವರ್ಷ ಆ ಸಂಪ್ರದಾಯವನ್ನು ರದ್ದುಗೊಳಿಸಿ ಅಂದು ಅದನ್ನು ಹಾಡುವುದನ್ನು ನಿಷೇದಿಸಲಾಯಿತು. ಕ್ರೈಸ್ತಧರ್ಮದ ಚಿಹ್ನೆಯಾದ, "ಶಿಲುಬೆ" ಎಂಬ ಶಬ್ಧ ಅದರಲ್ಲಿರುವ ಕಾರಣ, ನಮ್ಮದು ಜಾತ್ಯಾತೀತ ರಾಷ್ಟ್ರವಾಗಿರುವಾಗ, ಒಂದು ಧರ್ಮದ ಚಿಹ್ನೆಯ ಶಬ್ಧ ಆ ಹಾಡಿನಲ್ಲಿ ಬಳಸುವುದು ಸೂಕ್ತವಲ್ಲ ಎಂಬ ಚಿಂತನೆಗೊಳಪಟ್ಟು ಪ್ರಸ್ತುತ ಸರ್ಕಾರ, ಅದಕ್ಕೆ ನಿಷೇಧ ಹೇರಿರಬಹುದು.

ಆದರೆ, ಈ ನಿಷೇಧದ ಬೆನ್ನಿಗೆ, ಮಹಾತ್ಮ ಗಾಂಧಿಯ ಮೊಮ್ಮಗ ತುಷಾರ್ ಗಾಂಧಿ, ಪ್ರಸಿದ್ಧ ಸಮಾಜ ಸೇವಕ, ಬುದ್ಧಿಜೀವಿ, ವಂ. ಸೆಡ್ರಿಕ್ ಪ್ರಕಾಶ್ ಎಸ್. ಜೆ. ಇವರಿಗೊಂದು ಪತ್ರ ಬರೆದು, ಮಹಾತ್ಮ ಗಾಂಧಿಯ ನೆನಪಿಗಾಗಿ ಎಲ್ಲಾ ಕ್ರೈಸ್ತರು ಆಗಾಗ ಅದನ್ನು ಹಾಡಲು ಭಾರತದ ಪವಿತ್ರ ಸಭೆಗೆ ಎಲ್ಲಾ ಯಾಜರಿಕೆಗೆ ಮನವಿ ಸಲ್ಲಿಸಿದ್ದಾರೆ. ಇದು ಮಾತ್ರವಲ್ಲ, ವಿಶ್ವದಲ್ಲಿರುವ ಎಲ್ಲಾ ಯಾಜಕರೂ, ಧರ್ಮಭಗಿನಿಯರು, ಅವರ ದೈನಂದಿನ "ಚರ್ಚ್ ಪ್ರೇಯರ್" ಪುಸ್ತಕದಲ್ಲಿರುವ, ರಾತ್ರಿಯ ಪ್ರಾರ್ಥನೆಯಲ್ಲಿ ಅವರು ಅದನ್ನು ಹಾಡದೆ ಅಥವಾ ಪಠಿಸದೆ ಇರುವ ಪ್ರಶ್ನೆಯೇ ಇಲ್ಲ. ದೇವಾಲಯಗಳಲ್ಲಿ ನಡೆಯುವ ಪೂಜೆ ಅಥವಾ ಆರಾಧನೆಯ ಸಮಯದಲ್ಲಿ ಎಲ್ಲಾ ಭಕ್ತರಿಗೂ, ಆ ಹಾಡಿನ ಬಗ್ಗೆ ತಿಳಿದಿರುವ ಕೆಲವು ಅಕ್ರೈಸ್ತರಿಗೂ ಅದನ್ನು ಆಗಾಗ ಹಾಡುವ ಅಥವಾ ಪಠಿಸುವ ವಾಡಿಕೆ ಇದೆ. ಅದನ್ನು ಬಳಸುವವರಿಗೆಲ್ಲಾ, ತಮ್ಮ ಆತ್ಮಿಕ ಮತ್ತು ನೈತಿಕ ಜೀವನ ಸುಧಾರಿಸಲು, ದೇವರೊಂದಿಗೆ ಸಂಬಂಧ ಹೆಚ್ಚಿಸಲು, ಉತ್ತಮ ವ್ಯಕ್ತಿಗಳಾಗಿ, ಎಲ್ಲಾರನ್ನೂ ಪ್ರೀತಿಸಿ, ಗೌರವಿಸಿ, ಮೌಲ್ಯಧಾರಿತ ಹಾಗೂ ಸಾಮರಸ್ಯ–ಐಕ್ಯತೆಯ ಬಾಳು ಬಾಳಿ, ತಮ್ಮ ಜೀವನ ಸಾರ್ಥಗೊಳಿಸಲು, "ನನ್ನೊಂದಿಗಿರು"– **Abide With Me** ಎಂಬ ಈ ಗೀತೆ ಸಹಾಯವಾಗುವುದು ■



ಭೆಥನಿ ಭಗಿನಿ ಮಾರಿ ಆಂಜ್
ಭೆಥನಿ ಕಾನ್ವೆಂಟ್, ಬೆಂದೂರು


## ಯುಗಾದಿ

ಯುಗಾದಿ ಎಂದರೆ ಯುಗದ ಆರಂಭ. ಸಂಸ್ಕೃತ ಭಾಷೆಯಲ್ಲಿ ಯುಗದ ಆದಿ ಎರಡು ಪದಗಳಿಂದ ಯುಗಾದಿ ಪದ ಬಂದಿತು. ಯುಗಾದಿ ಎಂದರೆ ಪ್ರಕೃತಿ ಮಧುಮಗಳಂತೆ ಶೃಂಗರಿಕೊಳ್ಳುವ ಸುದಿನ. ಬ್ರಹ್ಮನು ಕೂಡ ಸೃಷ್ಠಿಯನ್ನು ಸೃಷ್ಠಿಸುವ ಕಾರ್ಯ ಕೂಡ ಇಂದೇ ಪ್ರಾರಂಭಿಸಿದನು ಎಂಬ ನಂಬಿಕೆ ಇದೆ.

ಅಸುರಿ ಶಕ್ತಿಯ ವಿರುದ್ಧ ಸಾತ್ವಿಕ ಶಕ್ತಿಯ ವಿಜಯ ದಿನವಿದು. ಶ್ರೀರಾಮ ರಾವಣನ್ನು ಸಂಹರಿಸಿ ಅಯೋಧ್ಯೆಗೆ ಬಂದ ರಾಮ ರಾಜ್ಯವಾಳಲು ಆರಂಭಿಸಿದನು. ಅಯೋಧ್ಯೆಯ ಪ್ರಜೆಗಳು ಸಂತೋಷದಿಂದ ಮನೆ ಮುಂದೆ ವಿಜಯ ಪತಾಕೆಯನ್ನು ಹಾರಿಸಿದರು. ಅದೇ ಇಂದಿಗೂ ಆಚರಿಸುತ್ತಿರುವ ಪದ್ಧತಿ ಗುಡಿ ಪಾಡ್ಯ ಅಥವಾ ಗುಡಿ ಬಾವುಟ ಎನ್ನುತ್ತಾರೆ. ಯುಗಾದಿ ಎಂದರೆ ಹಬ್ಬಗಳಲ್ಲಿ ಶ್ರೇಷ್ಠ ನಮ್ಮ ಹಬ್ಬಗಳಿಗೆ ತನ್ನದೆ ಆದ ಹಿನ್ನಲೆಗಳಿವೆ

ಈ ಮೂಲಕ ಹಲವು ಸಂದೇಶ ಸಾರುವುದು.

ಹಬ್ಬದ ದಿನ ಬೆಳಗ್ಗೆ ಬೇಗ ಎದ್ದು ಎಣ್ಣೆ ಸ್ನಾನ ಮಾಡಿ ಹೊಸ ಬಟ್ಟೆಯನ್ನು ಧರಿಸಿ ದೇವರನ್ನು ಸ್ಮರಿಸಿ ಹಿರಿಯರ ಆರ್ಶಿವಾದ ಪಡೆದು ಬೇವು ಬೆಲ್ಲ ತಿನ್ನಲಾಗುತ್ತದೆ. ಬೇವು ಕಷ್ಟದ ಪ್ರತೀಕ ಬೆಲ್ಲ ಸುಖದ ಪ್ರತೀಕ ಜೀವನದಲ್ಲಿ ಬೇವು ಬೆಲ್ಲ ಸಮನಾಗಿ ಸ್ವೀಕರಿಸಬೇಕು ಬೇವು ಬೆಲ್ಲ ತಿಂದು ಒಳ್ಳೆಯ ಮಾತಾಡು ಎಂದು ಈ ಹಬ್ಬ ಸಾರುತ್ತದೆ ಬೇವು ಬೆಲ್ಲ ಅದರದೇ ಆದ ವೈಶಿಷ್ಟ್ಯಗಳು ಹೊಂದಿದೆ.



ಕಹಿಯನ್ನ ಕಳೆದು ಸಿಹಿಯನ್ನು ಗುಣಿಸೋಣ ■

ಅಂಜಲಿ ಶಿದ್ಲಿಂಗ್

## ನವ ಯುಗದ ಆದಿ...

ಪಲ್ಲವಿ ಚೆನ್ನಬಸಪ್ಪ

ಯುಗಾದಿ ಎಂದರೆ ಮೊದಲು ನೆನಪಾಗುವುದು ಬೇವುಬೆಲ್ಲದ ಮಿಶ್ರಣ, ಜೊತೆಗೆ ವಸಂತಮಾಸದ ಚಿಗುರು. ಯುಗಾದಿ ಹಲವು ಆರಂಭಗಳಿಗೆ ಮುನ್ನುಡಿ. ಚೈತ್ರ ಶುದ್ಧ ಪಾಡ್ಯಮಿಯ ದಿನವೆ ಯುಗಾದಿ. ಋತುಗಳ ರಾಜ ವಸಂತಕಾಲ ಆರಂಭವಾಗುವ ಈ ದಿನದಿಂದ ಸೂರ್ಯ ಕೊಂಚ ತನ್ನ



ಪ್ರಖರತೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವ ಕಾಲ. ಅಧಿಕೃತವಾಗಿ ಬೇಸಿಗೆಕಾಲ ಆರಂಭವಾಗುವ ದಿನ. ಹಿಂದೂ ಪಂಚಾಂಗದ ಪ್ರಕಾರ 60 ಸಂವತ್ಸರಗಳಿವೆ. ಪ್ರತೀವರ್ಷದ ಯುಗಾದಿಗು ಹಳತರ ಅಂತ್ಯ ಮತ್ತು ಹೊಸ ಸಂವತ್ಸರದ ಆರಂಭವಾ ಗುತ್ತದೆ. ಶ್ರೀಕೃಷ್ಣ ಭಗವದ್ಗೀ ತೆಯಲ್ಲಿ ಋತುಗಳಲ್ಲಿ 'ವಸಂತ ಋತು ನಾನು' ಎಂದು ಹೇಳಿಕೊಂಡಿದ್ದಾನೆ. ಅದಕ್ಕಾಗಿಯೇ ವಿಶೇಷ ಮಹತ್ವವಿದೆ ಈ ಋತುವಿಗೆ.

ಪ್ರಸ್ತುತ 36ನೇ ಶುಭಕೃತ ಸಂವತ್ಸರಕ್ಕೆ ಕಾಲಿಡುತ್ತಿದ್ದೇವೆ. ಯುಗಾದಿಯಂದು ಸೂರ್ಯೋದಯದ ಸಮಯದಲ್ಲಿಯೇ ಬ್ರಹ್ಮದೇವ ಸೃಷ್ಟಿಯ ಕಾರ್ಯವನ್ನು ಆರಂಭಿಸಿದರು, ಕಾಲಗಣನೆ ಆರಂಭವಾದ ದಿನ ಮತ್ತು ನಾರಾಯಣನ ಏಳನೇ ಪ್ರಸಿದ್ಧ ಅವತಾರವಾದ ಶ್ರೀರಾಮ ತನ್ನ ಸಹೋದರ ಲಕ್ಷ್ಮಣ ಮತ್ತು ಪತ್ನಿ ಸೀತೆಯೊಟ್ಟಿಗೆ 14 ವರ್ಷಗಳ ವನವಾಸ ಮುಗಿಸಿ, ಮರಳಿ ಅಯೋಧ್ಯೆಗೆ ಬಂದು ರಾಜನಾಗಿ ಪಟ್ಟಾಭಿಷಿಕ್ತನಾದ ದಿನ, ಅಂದರೆ ರಾಮರಾಜ್ಯ ಆರಂಭವಾದ ದಿನವೆಂದು ಪುರಾಣ ಗ್ರಂಥಗಳಲ್ಲಿ ಉಲ್ಲೇಖವಿದೆ. ಯುಗಾ ದಿಯಾದ ಒಂಬತ್ತನೇ ದಿನ ಶ್ರೀರಾಮ ನವಮಿಯ ಆಚರಣೆ. ಅಂದರೆ ಶ್ರೀರಾಮ ಅಯೋಧ್ಯೆಯಲ್ಲಿ ಅವತಾರವೆತ್ತಿಬಂದ ದಿನದ ಸಂಭ್ರಮ ದೇಶದೆಲ್ಲೆಡೆ ಆಚರಿಸಲಾಗುತ್ತದೆ.

6ನೇ ಪುಟಕ್ಕೆ

Visit Our Webiste: www.pingara.com

## ‘ಬಿಟ್ಟಿ ಲಾಭಾ ಆಂಡಾ’

ತೊಡ್ಡೆದಾ ನೈಯಿೀತ ಕಿಲೆಂಜಿ
ಪೊರ್ಮುದು ಮುಲ್ಲುದಾ ನಂಜಿ
ತುಪ್ಪೇಡ್ ಕುಲ್ಲಾಂಡ್ ರಾಣಿನ್ ಒಂಜಿ,
ಅವು ಕಂಡೋನಾರೆ ಬತ್ತಿನಾಯೆಗ್
ಬುಡುದು ರಾದ್ ಪೋಂಡು ತಾನ್.

## ಮಾನ-ದಂಡಗಳು

ಇಲ್ಲ, ಎನ್ನಲಾಗದು ಅವಕಾಶಗಳು ಸಿಗದೆ
ನೋಡಲು-ಪರಾಂಬರಿಸಲು ಇರದೆ,
ಕೇಳಿಕೊಂಡು ಮಾತಾಡಿಕೊಂಡು ರಾಜಿಯಾಗದೆ
ಸಿಹಿ-ಹುಳಿ ಪಾಕವಾಗದು ಜೀವನದ್ದೇ.

## ಮರಣ್ ಮಾಕಾ ಯೆತಾನಾ

ಏಕ್ ದೀಸ್ ಮಿರ್ನಿ ಘಾಂಟಿ ಮಾರ್ತೊಲೊ
ಹಾಂವ್ ಮೆಲೊಂ ತಸೆಂ ಜಾಹೀರ್ ಕರ್ತೊಲೊ...
ತಾಚಾ ಅವಾಜಾಕ್ ಲೋಕ್ ಕಾನ್ ದಿತಲೊ;
ಅನಿ ಆಯ್ಕ್ ಮಿರ್ನೀ..
ಲೋಕ್ ಮಾಕಾ ವಾಖಣ್ತೊಲೊ.



ರೇಮಂಡ್ ಡಿಕುನಾ ತಾಕೊಡೆ

## ಪತಿ ಪತ್ನಿ ಸುತಾಲಯ:02

2ನೇ ಪುಟದಿಂದ

ಅದಕ್ಕಾಗಿಯೇ ಸಹ್ಯವಾಗಬೇಕಾದರೆ ಮೆಚ್ಚುಗೆಗಳು ಇರಬೇಕು. ಮೆಚ್ಚುಗೆಗಳು ಬರಲು ಇಬ್ಬರೂ ಮಾನಸಿಕವಾಗಿ ಗೋಂದು ಆಗಿರಬೇಕು. ಇದರಿಂದ ಆಗುವ ಒತ್ತಡ ನಿರ್ವಹಣೆಯು ಖಾಸಗಿ ಜೀವನ ಅಂದರೆ **bedroom** ಹೊಂದಾಣಿಕೆವರೆಗೆ ನಡೆಯುತ್ತದೆ.

ಇದರಿಂದ ತೃಪ್ತಿ, ಸಂತೃಪ್ತಿಗಳು ಪ್ರಾಪ್ತಿಯಾಗಿ ಕೀಲೆಣ್ಣೆ ಸರಿಯಾಗಿ ಹಾಕಿದ **wheel**ಗಳಂತೆ ಶಬ್ದರಹಿತ ಸಂಸಾರ ನಡೆಯಲು ಯೋಗ್ಯ ಆಗಿಬಿಡುತ್ತದೆ.

ಇದೊಂದು ಚಕ್ರ ಇದ್ದಂತೆ.

ಪ್ರತಿಯೊಂದಲ್ಲೂ ಮೂಗು ತೂರಿಸದೆ ಸಂಗಾತಿಯ ದಿನಚರಿಗಳನ್ನು ಗೌರವಿಸುತ್ತಾ ಇಬ್ಬರೂ ತಂತಮ್ಮ ಖಾಸಗೀತನವನ್ನು ರಕ್ಷಣೆ ಮಾಡಲು ಬಿಟ್ಟು ಅದಕ್ಕೆ ಬೇಕಾದ **space** ಅನ್ನು ಕೊಡುತ್ತಾ ಇರಬೇಕಾಗುತ್ತದೆ.

ಇದು ಸಂಗಾತಿಯ ಅಸ್ತಿತ್ವವನ್ನು ಗೌರವಿಸುವ ಒಂದು ಸಮಾನಂತರ ವಿಧಾನ.

ಇದರೊಟ್ಟಿಗೆ ಮೆಚ್ಚುಗೆಯೊಂದು ಹೃದಯದೊಳಗಿಂದ ಬರಲು ಸಂಗಾತಿಯ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ರೂಡಿಸಿಕೊಂಡಿರಬೇಕಾಗುತ್ತದೆ. ವಿರೋಧಭಾಸಗಳನ್ನು ಇಟ್ಟುಕೊಂಡು ತೃಪ್ತಿಯ ನಾಟಕ ಹೆಚ್ಚು ಹೊತ್ತು ಮಾಡಲಾಗದು.

ಹೊಂದಾಣಿಕೆ ಪತಿ ಪತ್ನಿಯರಲ್ಲಿ ಮಾಡುವುದು ಪರಿಸ್ಥಿತಿ ಸರಿಯಾಗಲು ಒಂದು ಅವಾಕಾಶವಾದರೂ ಮೆಚ್ಚುಗೆ ಒಬ್ಬರನ್ನೊಬ್ಬರು ಮಾಡದಿದ್ದರೆ ಕಷ್ಟ.

ಯಾವುದೊ ಕೆಲಸ ಅಥವ **manner** ವ್ಯವಾಹಾರ ಸಂಗಾತಿಗೆ ಸಹ್ಯ ಅಲ್ಲ ಅಥವಾವ ಮೆಚ್ಚುಗೆ ಆಗುತ್ತಿಲ್ಲ ಎಂದು ತಿಳಿದರೆ ಅದನ್ನೂ ಬದಲಿಸುವುದು ಎಂದರೆ ಸರಿಯಾಗದು. ಬದಲಿಗೆ ಸಂಗಾತಿಗೆ ಬೇಕಾದ ಹಾಗೆ **modified** ಮಾಡಬೇಕು.

ಆದರೆ ಇದರಿಂದ ಬದಲಾವಣೆ ತನಗೂ ಸಹ್ಯವಾಗುವಂತಿರಬೇಕು.

ಒಳ್ಳೆಯ ಒಂದು ಮನಸ್ಥಿತಿಗೆ ಬರಲು ಒಬ್ಬರನ್ನೊಬ್ಬರು ಮನಸ್ಸು ಪೂರ್ತಿಯಾಗಿ ಒಪ್ಪಿಕೊಳ್ಳಬೇಕು. ಬೇಕಾದಷ್ಟು ಪತಿ ಪತ್ನಿ ನಡುವೆ **patchwork** ಮಾತ್ರ ಆಗುತ್ತದೆ. ಮನಸ್ಸು ಪೂರ್ತಿಯಾಗಿ ಒಪ್ಪಿಕೊಳ್ಳದೆನೆ ಇರುತ್ತಾರೆ.

ಇದಕ್ಕೇ ಬೇರೆ ಬೇರೆ ಅಭ್ಯಾಸಗಳ ದಾಸರಾಗುವುದು ಆಗಿಬಿಡುತ್ತಾರೆ.

ಬಾಯಿಗೆ ಹಾಕುವ ಕವಳದಿಂದ ಹಿಡಿದು ಮೂಗಿನ ಮೂಗಿನ ಹೊಳೇಗೆ ಬೆರಳು ತೂರಿಸುವುದು, ಸಮಯವಲ್ಲಾದಾಗ ಗೋಚರರಹಿತವಾಗಿ ತುರಿಸುವುದು ಮಾಡಿ ತಮ್ಮ ವಿಕೃತಿ ವ್ಯಕ್ತವಾಗಬಹುದು. ಅದಕ್ಕೆ ಒಳ ಮನಸ್ಸಿನಿಂದ ಒಪ್ಪಿಕೊಂಡೇ ಸಂಸಾರ ಸುಗಮಯಗೊಳಿಸಲೇಬೇಕು ಪಿ

ರೆ. ಥಿಯೋಲೊಜಿಯನ್

## ನವ ಯುಗದ ಆದಿ...


5ನೇ ಪುಟದಿಂದ

ಈ ಹಬ್ಬವನ್ನು ಕರ್ನಾಟಕದಲ್ಲಿ ಯುಗಾದಿ ಎಂದರೆ, ಉತ್ತರ ಭಾರತದ ಕಡೆ ಭೈಸಾಖಿ ಎಂದೂ ಮತ್ತು ಮಹಾರಾಷ್ಟದ ಕಡೆ ಗುಡಿಪಾಡ್ವ ಎಂದೂ ವಿಶೇಷವಾಗಿ ಆದರಿ ಸುವ ಸಂಪ್ರದಾಯವಿದೆ. ಹಿಂದೂಗಳು ಆಚರಿಸುವ ಹಬ್ಬಗಳ ಹಿಂದೆ ಹಲವು ವೈಜ್ಞಾನಿಕ ಕಾರಣಗಳೂ ಇರುತ್ತವೆ. ಈ ಹಬ್ಬದಲ್ಲಿ ಹರಳೆಣ್ಣೆಯ ಅಭ್ಯಂಜನ ಮತ್ತು ಪಂಚಾಂಗ ಶ್ರವಣ ಅಥವಾ ಪಠಣಕ್ಕು ಬಹಳ ಮುಖ್ಯವಾದ ಪಾತ್ರವಿದೆ. ಯುಗಾದಿಯಂದು ಅಭ್ಯಂಜನ ಮಾಡಿದರೆ ಅದರ ತಂಪು, ಬೇಸಿಗೆಕಾಲವನ್ನು ಸವೆಸಲು ದೇಹಕ್ಕೆ ಮತ್ತೆ ಚರ್ಮಕ್ಕೆ ಹೊಸ ಉರುಪನ್ನು ತರುತ್ತದೆ. ಬೇವು ಬೆಲ್ಲ ತಿನ್ನುವುದರಿಂದ ದೇಹಕ್ಕೆ ದೃಢತೆ ದೊರೆಯು ತ್ತದೆ. ಗ್ರಹ, ನಕ್ಷತ್ರ, ಮಾಸ, ಋತು, ವರ್ಷ, ವರ್ಷಾಧಿಪತಿಗಳೂ ಸೃಷ್ಟಿಯಾದ್ದ ದ್ದನ್ನು ಪಂಚಾಂಗದಲ್ಲಿ ಪಠಿಸುವುದರಿಂದ ಅಥವಾ ಶ್ರವಣ ಮಾಡುವುದರಿಂದ, ಸೃಷ್ಟಿಯ ವಿಸ್ಮಯದ ಅರಿವು ನಮಗಾಗುತ್ತದೆ.

ಇನ್ನೂ ಈ ವಸಂತಕಾಲದ ಸೊಬಗು ಕಣ್ತುಂಬಿಕೊಳ್ಳುವುದೇ ಚೆಂದ. ಕೋಗಿಲೆಯ ದನಿ ಇಂಪಾಗಲೆಂದೇ ಮಾಮರ ಚಿಗುರಿ ನಿಂತಂತೆ, ಎಲ್ಲ ಗಿಡ ಮರಗಳು ತನ್ನ ಹಳೆತನವನ್ನು ಕಳೆದುಕೊಂಡು ಹೊಸತಾಗಿ ಮೈದುಂಬಿ ಚಿಗುರಿ ನಿಲ್ಲುವ ಕಾಲ. ಎಲ್ಲೆಡೆ ಸಂಭ್ರಮ, ಸೃಷ್ಟಿಯ ಅದ್ಭುತವೆನಿಸುವ ಕುಸುಮಗಳ ಘಮ, ಹೊಸ ಚೈತನ್ಯದೊಂದಿಗೆ ಪ್ರಕೃತಿಯು ಹೊಸ ವರ್ಷವನ್ನು ಸ್ವಾಗತಿಸುವ ಈ ಸುದಿನ ಯುಗದ ಆದಿಯ ದಿನ.

ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ ಎಂಬಂತೆ, ಪ್ರತೀ ವರ್ಷವು ಯುಗಾದಿ ಹೊಸತನವನ್ನು ಹೊತ್ತು ಬರುತ್ತದೆ. ಹೊಸ ಚಿಗುರಿನೊಂದಿಗೆ ಹಳೆ ಬೇರಿನ ಸಂಪ್ರದಾಯದ ಶುಭ ಆಚರಣೆ ಗಳನ್ನು ಉಳಿಸಿ, ಬೆಳೆಸಿಕೊಳ್ಳೋಣ. ಎಲ್ಲರ ಬಾಳಿನಲ್ಲಿ ಈ ಯುಗಾದಿ ನವೀನತೆಯನ್ನು ಚೆಲ್ಲಲಿ. ಚೈತ್ರದ ಚಿಗುರಂತೆ ಬದುಕು ಸದಾ ಚೈತನ್ಯತೆಯಿಂದ ಕೂಡಿರಲಿ. ಒಳಿತಾಗಲಿ. ಎಲ್ಲರ ಬಾಳು ಬೆಳಕಾಗಲಿ. ಸರ್ವರಿಗೂ ಯುಗಾದಿಯ ಶುಭಾಶಯಗಳು... ಪಿ

ಪಲ್ಲವಿ ಚೆನ್ನಬಸಪ್ಪ


ಪ್ರತಿದಿನಗಳಿಗಾದಿ ವಿಳಾಸದೊಂದಿಗೆ ರೂ.100 ಈ ನಂಬ್ರಕ್ಕೆ 9964126531 ಗೂಗಲ್ ಪೆ/ಫೋನ್ ಪೆ ಮಾಡಿ ಪ್ರತಿಯನ್ನು ನಿಮ್ಮ ಮನೆಗೆ ತರಿಸಿಕೊಳ್ಳಬಹುದು

GUIDENCE FOR

- Passport Online
- PCC
- Certificate Attestaion (Home Department & Embassy)
- Adding Spouse Name
- Visa Stamping
- Immigration

PINGARA KANNADA NEWS PAPAER

ಕ್ರೀಸ್ತಾಂವಾಚೆ ಏಕ್ ಮಾತ್ರ್ ಕನ್ನಡ ಪತ್ರ್



Raymond Dcunha
MA Journalism, BA LLB, D'thio
ಸಂಪಾದಕ್/Editor
Pingara Paper, Pingara.com

ESTD: 2004 ಯಶಸ್ವೀ 18 ನೇ ವರ್ಷಕ್ಕೆ ಪಾದಾರ್ಪಣೆ

ಚಂದಾ ವಿವರ

| | |
|---|---|
| 1 Year | : Rs. 250/- |
| 5 Year | : Rs.1,000/- |
| 15 Years | : Rs. 3,000/- |
| Lifetime Subscribers | : Rs. 15,000/- |

Cheque Drawn on: Pingara
A/c No.: 510101005980630
IFSC Code: corp0000133
Union Bank of India, Pandeshwar, Mangalore - 575001

Visit Our Website: www.pingara.com

Pingara, Bishop's House, Church Building, 2nd Floor, Kodialbail Post, Mangalore - 575003
Email: pingaara@gmail.com Ph: 9845419482(M) (O) - 0824 2440822

ಪಿಂಗಾರ ಸಾಹಿತ್ಯ ಬಳಗ
ಮಂಗಳೂರು
Pingara, Opp. Yenepoya Hospital & Karnataka Bank, Kodialbail Post, Mangalore - 575003
Email: pingaara@gmail.com Website: www.pingara.com Mob: 9845419482



ರೇಮಂಡ್ ಡಿಕುನಾ, ತಾಕೊಡೆ ಸಾರಥ್ಯದಲ್ಲಿ, ಸಂದೇಶ ಪ್ರತಿಷ್ಠಾನ ಸಹಯೋಗದಲ್ಲಿ
ಯುಗಾದಿ ಹಬ್ಬದ ಪ್ರಯುಕ್ತ
"ಸಂಭ್ರಮದ ಕವಿಗೋಷ್ಠಿ"
ಪುಸ್ತಕ ಬಿಡುಗಡೆ, ಕೃತಿ ವಿಮರ್ಶೆ, ಸನ್ಮಾನ ಮತ್ತು ಯುಗಾದಿ ಕವಿಗೋಷ್ಠಿ
ದಿನಾಂಕ: 10-04-2022 ರವಿವಾರ, ಸಂಜೆ 3ಗಂಟೆಗೆ ಸ್ಥಳ: ಸಂದೇಶ ಪ್ರತಿಷ್ಠಾನ ಸಭಾಂಗಣ ನಂತೂರು, ಮಂಗಳೂರು

ಪುಸ್ತಕ ಬಿಡುಗಡೆ
ಡಾ. ಸುರೇಶ್ ನೆಗಳಗುಳಿ ಅಜಿತ
ಕೃತಿ ವಿಮರ್ಶೆ



ಕಾವ್ಯ ಭೋಜನ
ಧೀರತಮ್ಮನ ಕಬ್ಬ

ಉದ್ಘಾಟಕರು
ಫಾ। ಫ್ರಾನ್ಸಿಸ್ ಆಸಿಸಿ ಡಿ'ಅಲ್ಮೇಡಾ
ನಿರ್ದೇಶಕರು, ಸಂದೇಶ ಪ್ರತಿಷ್ಠಾನ

ಪುಸ್ತಕ ಬಿಡುಗಡೆ
ನವೀನ್ ನಾಯಕ್
ಸಂಸ್ಥಾಪಕರು, ಅಭಿಮೊ ಟೆಕ್ನಾಲೊಜಿ ಪ್ರೈ.ಲಿ.
ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಸದಸ್ಯರು

ಕೃತಿ ವಿಮರ್ಶೆ
ಅರವಿಂದ ಚೊಕ್ಕಾಡಿ
ಕೊಡಂಗಲ್ಲು ಮೂಡಬಿದಿರೆ

ಕವಿಗೋಷ್ಠಿ ಸಂಚಾಲಕರು
ಡಾ. ಸುರೇಶ ನೆಗಳಗುಳಿ
ಸಂಚಾಲಕರು

ಗೌರವ ಅತಿಥಿ
ಪಿ.ವಿ. ಪ್ರದೀಪ್ ಕುಮಾರ್
ಕಾದಂಬರಿಕಾರರು

ಕವಿಗೋಷ್ಠಿ ಅಧ್ಯಕ್ಷರು
ಮನ್ಸೂರ್ ಮುಲ್ಕಿ
ಹಿರಿಯ ಬಹುಭಾಷಾ ಕವಿ

ಕವಿಗೋಷ್ಠಿಯಲ್ಲಿ ಭಾಗವಹಿಸುವ ಕವಿಗಳು

| | | |
|---|---|---|
| ಅರ್ಚನಾ ಎಂ ಬಂಗೇರ ಕುಂಪಲ | ಜಯಲಕ್ಷ್ಮಿ ಶರತ್ ಶೆಟ್ಟಿ | ವ. ಉಮೇಶ್ ಕಾರಂತ |
| ಸೌಮ್ಯಾ ಗೋಪಾಲ್ | ಕತ್ತರಿಕೋಡಿ, ಮಂಜೇಶ್ವರ | ನವೀನ್ ಪಿರೇರಾ ಸುರತ್ಕಲ್ |
| ರಶ್ಮಿ ಸನಿಲ್ | ಗುರುರಾಜ್ ಎಂಆರ್ ಕಾಸರಗೋಡು | ಅನುರಾಧಾ ರಾಜು |
| ವೆಂಕಟೇಶ ಗಟ್ಟಿ | ಡಾ ವಾಣಿಶ್ರೀ ಕಾಸರಗೋಡು | ಗೋಪಾಲಕೃಷ್ಣ ಶಾಸ್ತ್ರಿ |
| ಗುಣಾಜೆ ರಾಮಚಂದ್ರ ಭಟ್ | ರೇಖಾ ಸುದೇಶ್ ರಾವ್ | ಮಾನಸ ಕೈಂತಜೆ |
| ಮನ್ಸೂರ್ ಮುಲ್ಕಿ | ಹಿತೇಶ್ ಕುಮಾರ್ ಎ | ಡಾ ಸುರೇಶ ನೆಗಳಗುಳಿ |
| ಚಂದ್ರಿಕಾ | ಗೀತಾ ಲಕ್ಮೀಶ್ | ರೇಮಂಡ್ ಡಿಕೂನಾ ತಾಕೊಡೆ |
| ಪರಿಮಳ ಮಹೇಶ | ವಿಂಧ್ಯಾ.ಎಸ್.ರೈ | |

ಎಲ್ಲರಿಗೂ ಆದರದ ಸ್ವಾಗತ ಬಯಸುವವರು
ರೇಮಂಡ್ ಡಿಕುನಾ ತಾಕೊಡೆ
ಸಂಚಾಲಕರು


Licensed to Post without repayment Licence No.SKWPP/MNG/183/2022-24 Regd. No. MNG/954/2022-2024
Edited, Published & Owned by Raymond D'Cunha, Published at No. 10-156, Suvarna road End, Kankanady 'B Village', Kankanady Post, Mangalore - 575002, DK
Printed by Him at Pingara Printers, No. No. 10-156, Suvarna Road End, Kankanady 'B Village', Kankanady Post, Mangalore - 575002, DK